# 1

# ವಂದನೆಗಳು: ಆತ್ಮನಿಂದ ಪರಿಶುದ್ಧರಾದವರಿಗೆ

# (1:1, 2)

ಅಪೊಸ್ತಲನು ಔಪಚಾರಿಕವಾಗಿ ತನ್ನ ಪತ್ರವನ್ನು ಆರಂಭಿಸಿದ್ದಾನೆ. ಶಾಂತತೆಯಿಂದ, ನಮ್ರತೆಯ ಸ್ವಭಾವದಿಂದ, ಆತನು ತನ್ನನ್ನು ಗುರುತಿಸಿಕೊಂಡಿದ್ದಾನೆ. ಸ್ವಪರಿಚಯಿಸಿಕೊಳ್ಳುವಿಕೆಯು ಮತ್ತು ಗಾಂಭೀರ್ಯಯುತವಾದ ಆರಂಭಿಕ ವಚನಗಳು ಲೇಖಕನು ಕೇಳಿಸಿಕೊಳ್ಳುವದನ್ನು ಎದುರುನೋಡುವವನಾಗಿದ್ದಾನೆ ಎಂಬುದನ್ನು ಸ್ಪಷ್ಟಪಡಿಸುವವು ಆಗಿವೆ. ಆತನ ಮಾತುಗಳು ಅಧಿಕಾರಯುತವಾದವು ಅಲ್ಲ; ಆತನು ತನ್ನ ವೈಯಕ್ತಿಕ ಅನುಸರಿಸುವಿಕೆಯನ್ನು ನಿರ್ಮಿಸಲು ಅಥವಾ ತನ್ನ ಬಲವನ್ನು ಸಮರ್ಥಿಸಲು ಬರೆಯುತ್ತಿಲ್ಲ. ಸಭೆಯನ್ನು ಪ್ರೋತ್ಸಾಹಿಸುವದಕ್ಕೆ ನಿರಂತರವಾದ ಕಷ್ಟಗಳ ಜೊತೆ ವ್ಯವಹರಿಸಲು ಅವರಿಗೆ ಸಂಪನ್ಮೂಲಗಳನ್ನು ಕೊಡಲು, ಕ್ರಿಸ್ತನ ನಂಬಿಕೆಯಲ್ಲಿ ಬಲಪಡಿಸಲು, ಮತ್ತು ಜೀವಿತದಲ್ಲಿ ಪವಿತ್ರತೆಯನ್ನು ಪ್ರೇರೇಪಿಸಲು ಆತನು ಬರೆದನು. ಪತ್ರದ ಆರಂಭಿಕ ಸಾಲುಗಳು ಅದು ಏನನ್ನು ಅನುಸರಿಸುತ್ತದೆಯೋ ಅದರ ಅಡಿಪಾಯದಲ್ಲಿ ಇರುವುದಾಗಿದೆ.

## ಆರಂಭಿಕ ವಂದನೆ (1:1, 2)

**[1]ಯೇಸು ಕ್ರಿಸ್ತನ ಅಪೊಸ್ತಲನಾದ ಪೇತ್ರನು ಪೊಂತ ಗಲಾತ್ಯ ಕಪ್ಪದೋಕ್ಯ ಆಸ್ಯ ಬಿಥೂನ್ಯ ಎಂಬ ಸೀಮೆಗಳಲ್ಲಿ ಚದರಿರುವಂಥ ಪ್ರವಾಸಿಗಳಾದ ದೇವಜನರಿಗೆ [2]ಅಂದರೆ ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ ದೇವರಿಗೆ ವಿಧೇಯರಾಗುವದಕ್ಕೂ ಯೇಸು ಕ್ರಿಸ್ತನ ರಕ್ತದಿಂದ ಪ್ರೋಕ್ಷಿತರಾಗುವದಕ್ಕೂ ತಂದೆಯಾದ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ ಆರಿಸಿಕೊಳ್ಳಲ್ಪಟ್ಟವರಿಗೆ ಬರೆಯುವದೇನಂದರೆ ನಿಮಗೆ ಕೃಪೆಯೂ ಶಾಂತಿಯೂ ಹೆಚ್ಚೆಚ್ಚಾಗಿ ದೊರೆಯಲಿ.**

**ವಚನ 1.** ಲೇಖಕನು ತನ್ನನ್ನು ತಾನು ಎರಡು ರೀತಿಯಲ್ಲಿ ಪರಿಚಯಿಸಿಕೊಳ್ಳುವವನಾಗಿದ್ದಾನೆ: **ಪೇತ್ರ** ಎಂದು, ನಂತರ **ಯೇಸು ಕ್ರಿಸ್ತನ ಅಪೊಸ್ತಲ** ಎಂದು. ಆತನ ಹುಟ್ಟು ಹೆಸರು ಸೀಮೋನ ಆಗಿತ್ತು ಅಥವಾ ಹೆಚ್ಚು ಯೋಗ್ಯವಾಗಿ ಸಿಮಿಯೋನ ಎಂದು ಆಗಿತ್ತು (ಅಪೊಸ್ತಲರ ಕೃತ್ಯಗಳು 15:14; 2 ಪೇತ್ರ 1:1 ಕೆಲ ಪ್ರಾಚೀನ ಗ್ರೀಕ್ ಹಸ್ತ ಪ್ರತಿಗಳಲ್ಲಿ). ಇದು ಯೆಹೂದ್ಯರಲ್ಲಿ ಸಾಮಾನ್ಯವಾದ ಹೆಸರಾಗಿತ್ತು. ಅದೇ ಹೆಸರಿನವರಾದ ಇತರರಿಂದ ಬೇರ್ಪಡಿಸಿದಾಗ, ಆತನು ಯೋನನ ಮಗನಾದ ಸೀಮೋನ (ಬಾರ್ಜೋನ; ಮತ್ತಾಯ 16:17) ಅಥವಾ ಪರ್ಯಾಯವಾಗಿ ಯೋಹಾನನ ಮಗನಾದ ಸೀಮೋನ (ಯೋಹಾನ 1:42) ಎಂದು ಆತನು ಕರೆಯಲ್ಪಡುತ್ತಿದ್ದನು. ಅಪೊಸ್ತಲನ ಪೂರ್ವಜರ ಬಗ್ಗೆ ಹೆಚ್ಚಿನದೇನೂ ನಮಗೆ ತಿಳಿಯದು.

ಮನುಷ್ಯ ಸಾಧ್ಯತೆಯೊಳಗೆ ವೈಶಿಷ್ಯವಾದ ವಿವೇಕದೊಡನೆ, ಯೇಸು ಸೀಮೋನನನ್ನು ಮೊದಲಸಾರಿ ಭೇಟಿಯಾದಾಗ, ಆತನು ಅವನಿಗೆ ಹೊಸದಾದ ಹೆಸರನ್ನು ಕೊಟ್ಟನು. ಆತನು ಅವನನ್ನು "ಕೇಫನು" ಎಂದು ಕರೆದನು (ಯೋಹಾನ 1:42). "ಕೇಫ" ಎಂಬುದು ಅರಮಾನಿಕ್ ಹೆಸರು ಗ್ರೀಕ್‌ನಲ್ಲಿ ಭಾಷಾಂತರವಾಗಿ "ಪೇತ್ರ" ಎಂದಾಯಿತು. ಒಂದು ವೇಳೆ ಆತನು ಇಂಗ್ಲೀಷ್ ಮಾತನಾಡುತ್ತಿದ್ದಾದರೆ ಯೇಸು ಆತನನ್ನು "ಬಂಡೆ" ಅಥವಾ "ಕಲ್ಲು" ಎಂದು ಕರೆಯಬಹುದಿತ್ತು. ಧರ್ಮಶಾಸ್ತ್ರದಲ್ಲಿ ಅಥವಾ ಕೀರ್ತನೆಗಳಲ್ಲಿ, ಇಸ್ರಾಯೇಲರು

ದೇವರನ್ನು ಬಂಡೆ ಎಂದು ಕರೆಯುತ್ತಿದ್ದರು.[1] ದೇವರು ನಿಶ್ಚಲನಾದವನು, ಯೋಗ್ಯವಾದವನು, ಬದಲಾಗದವನು ಆಗಿದ್ದಾನೆ. ಇದು ಒರಟಾದ, ದುಡುಕುತನದ, ಚಂಚಲತನದ ಗಲಿಲಾಯದ ಮೀಂಗುಲಿಗನು ಏನಾಗಬಲ್ಲನು ಎಂದು ಯೇಸು ತಿಳಿದಿದ್ದನು. ಯೇಸುವಿನ ಸನ್ನಿಧಿಯಲ್ಲಿ, ಯೋಹಾನನ ಮಗನಾದ ಸೀಮೋನನು ಬಲ ಮತ್ತು ದೃಢತೆಯ ಬಂಡೆಯಾಗಿ ರೂಪಾಂತರವಾದನು. ಈ ಮನುಷ್ಯನು, ಸೀಮೋನ ಬಾರ್ಜೋನನಾಗಿ ಜನಿಸಿದ್ದು, ತನ್ನನ್ನು ತಾನು ಪೇತ್ರನು ಎಂದು ಗುರುತಿಸಿಕೊಳ್ಳುವಲ್ಲಿ ಸಂತೋಷಿಸಿದನು. ಇದು ಆತನ ಓದುಗರು ಆತನನ್ನು ತಿಳಿದಿರುವಂತಹ ಹೆಸರಾಗಿದೆ.

ಆತನು ಎರಡನೆಯ ಪತ್ರದಲ್ಲಿ, ಪೇತ್ರನು ತನ್ನನ್ನು "ಯೇಸು ಕ್ರಿಸ್ತನ ದಾಸನೂ ಮತ್ತು ಅಪೊಸ್ತಲನೂ ಆಗಿರುವ" ಎಂದು ತನ್ನನ್ನು ಗುರುತಿಸಿಕೊಂಡಿದ್ದಾನೆ (2 ಪೇತ್ರ 1:1). ಪೌಲನು ಕೆಲಸಾರಿ ತನ್ನನ್ನು ತಾನು ಅದೇ ಮಾತುಗಳಿಂದ ವರ್ಣಿಸಿಕೊಂಡಿದ್ದಾನೆ (ರೋಮಾಪುರ 1:1; ತೀತ 1:1). ತನ್ನ ಮೊದಲ ಪತ್ರವನ್ನು ಆತನು ತೆರೆಯುತ್ತಿದ್ದಂತೆಯೇ, ತನ್ನನ್ನು ತಾನು "ಯೇಸು ಕ್ರಿಸ್ತನ ಅಪೊಸ್ತಲನು" ಎಂದು ಕರೆದುಕೊಳ್ಳುವದು ಪೇತ್ರನಿಗೆ ಸಾಕಾಗಿತ್ತು. ತನ್ನ ಸುತ್ತಲೂ ನೆರೆದಿರುವ ಹನ್ನೆರಡು ಮಂದಿಯನ್ನು ಆತನು ಸೂಚಿಸಿದನು ಮತ್ತು ಜಗತ್ತಿಗೆ ತನ್ನ ಸಾಕ್ಷಿಯಾಗಿರಲು ಮತ್ತು ಪ್ರತಿನಿಧಿಯಾಗಿರಲು ಕಳುಹಿಸಿಕೊಟ್ಟನು (ಲೂಕ 6:13). ಮತ್ತಾಯ ಮತ್ತು ಮಾರ್ಕರು ಹನ್ನೆರಡು ಮಂದಿಗೆ ಪ್ರತಿಯೊಬ್ಬರಿಗೂ ಅಪೊಸ್ತಲ ಎಂಬ ಬಿರುದು ಕೊಡಲ್ಪಟ್ಟಿತು (ಮತ್ತಾಯ 10:2; ಮಾರ್ಕ 6:30). ಆ ಪದವು ಲೂಕನ ಸುವಾರ್ತೆಯಲ್ಲಿ ಹೆಚ್ಚು ಸಾರಿ ಬಂದಿದೆ. ಅಪೊಸ್ತಲರ ಕೃತ್ಯದಲ್ಲಿ ಯೇಸುವಿನ ಸಾಕ್ಷಿಯಾಗಿ ಅದರಲ್ಲೂ ಆತನ ಪುನರುತ್ಥಾನದ ಸಾಕ್ಷಿಯಾಗಿ ಹನ್ನೆರಡು ಜನರು ಸಾಮಾನ್ಯವಾಗಿ "ಅಪೊಸ್ತಲರು" ಎಂದು ಕರೆಯಲ್ಪಡುತ್ತಿದ್ದರು (ಅಪೊಸ್ತಲರ ಕೃತ್ಯಗಳು 1:8; 2:32; 3:15). ಪೇತ್ರನು ತನ್ನ ಮೊದಲ ಪತ್ರದಲ್ಲಿ ತಾನು ಖಾಲಿ ಸಮಾಧಿಯ ಮತ್ತು ಪುನರುತ್ಥಾನಿತ ಕರ್ತನ ಸಾಕ್ಷಿ ಎಂಬುದನ್ನು ಮರೆತಿಲ್ಲ (5:1).

ಪೇತ್ರನು ಒಬ್ಬ ಅಪೊಸ್ತಲನಾಗಿದ್ದನು ಎಂದು ಪತ್ರದ ಮೊದಲ ಓದುಗರು ಕೇವಲ ನೆನಪಿಸಿಕೊಳ್ಳಬೇಕಿದೆ. ಅಲ್ಲಿ ಒಂದೇ ಒಂದು ಬಂಡೆಯು ಕ್ರೈಸ್ತಗುಂಪಿನಲ್ಲಿ ಇತ್ತು. ಆತನು ಯಾರು ಎಂದು ಅವರು ತಿಳಿದಿದ್ದರು. ಆತನು ತನ್ನನ್ನು ತಾನು ಅಪೊಸ್ತಲ ಎಂದು ಕರೆದು ಕೊಂಡಾಗ, ವರುಷಗಳ ಹಿಂದೆ ಆತನು ಮತ್ತು ಇತರರು ಯೇಸುವಿನ ಜೊತೆ ಗಲಿಲಾಯ ಮತ್ತು ಯೂದಾಯದ ಹತ್ತಿರ ತಮ್ಮೊಡನೆ ಅಲೆದಾಡಿದ್ದೆಡೆಗೆ ತಲುಪಿದನು. ಪೇತ್ರನು ಮಾತುಗಳು ಇತಿಹಾಸದಲ್ಲಿ ಬೇರೂರಿವೆ. ಯೇಸು ಯಾವುದೇ ರೀತಿಯಲ್ಲಿ ಕಲ್ಪನಾಕಥೆಯು ಆಗಿರಲಿಲ್ಲ, ಪ್ರೇತವಾಗಿರಲಿಲ್ಲ, ಆಶರೀರದ ಮಾದರಿಯು ಆಗಿರಲಿಲ್ಲ. ಆತನು ರಕ್ತ ಮತ್ತು ಮಾಂಸಧಾರಿಯಾಗಿದ್ದನು. ಅಪೊಸ್ತಲನಾದ ಆತನು ಯೇಸುವಿನೊಡನೆ ಇದ್ದನು. ಪೇತ್ರನು ಆತನು ಮಾತುಗಳನ್ನು ಕೇಳುತ್ತಿದ್ದನು, ಆತನನ್ನು ನೋಡಿದನು ಮುಟ್ಟಿದನು, ಕುಂಟನನ್ನು ವಾಸಿಮಾಡಿದನು, ಮತ್ತು ಕ್ರೂಜಿತನಾದ ಮತ್ತು ಪುನರುತ್ಥಾನಿತವಾದ ಆತನ ಸಾಕ್ಷಿಯಾದನು. ಇದು ಸತ್ಯವಾಗಿದ್ದ ಕಾರಣ, ಮತ್ತು ಅಪೊಸ್ತಲರಿಗೆ ಯೇಸು ನಿಯೋಗವನ್ನು ಕೊಟ್ಟ ಕಾರಣ ಪೇತ್ರನ ಮಾತುಗಳು ಅಧಿಕಾರಯುತವಾಗಿವೆ. ತನ್ನ ಪತ್ರವು ಜನರನ್ನು ದೇವರೆಗೆಡೆಗೆ ತಿರುಗಿಸಬೇಕು ಎಂದು ಅಪೊಸ್ತಲನು ಬಯಸಿದನು. ಶತಮಾನಗಳುದ್ದಕ್ಕೂ ಅವರನ್ನು ತಿರುಗಿಸುವದನ್ನು ಅದು ಮುಂದುವರೆಸುವುದಾಗಿದೆ. ನಿಜಾರ್ಥದಲ್ಲಿ, ಪೇತ್ರನ ಮಾತುಗಳು ದೇವರ ಮಾತುಗಳು ಆಗಿವೆ.

ರೋಮನ್ ಪ್ರಾಂತ್ಯಗಳಾದ **ಪೊಂತ ಗಲಾತ್ಯ ಕಪ್ಪದೋಕ್ಯ ಆಸ್ಯ ಬಿಥೂನ್ಯ**ಗಳಲ್ಲಿ ಇರುವಂಥ ಶಿಷ್ಯರನ್ನು ಪೇತ್ರನು ತನ್ನ ಪತ್ರದಲ್ಲಿ ಸಂಭೋಧಿಸಿದ್ದಾನೆ. ಪೊಂತ ಮತ್ತು ಬಿಥೂನ್ಯಗಳೆರಡು ಭೌಗೋಳಿಕವಾಗಿ ಸ್ಪಷ್ಟವಾಗಿ ಗುರುತಿಸಲ್ಪಟ್ಟಿದ್ದರೂ, ರೋಮನ್ನರು ಅವುಗಳನ್ನು ಒಂದೇ ಪ್ರಾಂತ್ಯವಾಗಿ ಜೋಡಿಸಿದ್ದರು. ಐದು ಹೆಸರುಗಳು ರೋಮನ್

ಆಡಳಿತಾತ್ಮಕ ಜಿಲ್ಲೆಗಳಲ್ಲಿ ಸೂಚಿಸಲ್ಪಟ್ಟಿದ್ದವು. ಎಲ್ಲಾ ನಾಲ್ಕು ದೊಡ್ಡ ಪ್ರಾಂತ್ಯಗಳು ಆಗಿದ್ದವು. ಅವುಗಳು ಸುಮಾರು ಸಂಪೂರ್ಣವಾದ ಏಷಿಯಾ ಮೈನರ್ ಅಥವಾ ಸಂಪೂರ್ಣವಾದ ಆಧುನಿಕ ಟರ್ಕಿ ದೇಶದ ಭೂಮಿ ಎಂದು ಜೊತೆಯಾಗಿ ಪುನರ್‌ಸಂಘಟಿತವಾಗಿವೆ.

ಪೇತ್ರನು ಈ ಪತ್ರವನ್ನು ಬರೆದಾಗ 60ರ ಮಧ್ಯ ಯುಗದ ಏಷಿಯಾ ಮೈನರ್‌ದಲ್ಲಿ ಎಷ್ಟು ಸಭೆಗಳು ಇದ್ದವು ಅಥವಾ ಎಷ್ಟು ಜನ ಕ್ರೈಸ್ತರು ಇದ್ದರು ಎಂಬುದು ಸ್ಪಷ್ಟವಾಗಿಲ್ಲ. ಏಷಿಯಾದ ಪ್ರಾಂತದಲ್ಲಿ ಅನೇಕ ನೂರು, ಕೆಲ ಸಾವಿರ ಕೂಡಾ ಕ್ರೈಸ್ತರು ಇದ್ದಿರಬಹುದು. ಪೌಲನ ಕಾರ್ಯದ ಮೂಲಕ, ಗಲಾತ್ಯದಲ್ಲಿ ಕೆಲ ಸಭೆಗಳು ಇದ್ದವು ಎಂದು ನಾವು ಬಲ್ಲವ ರಾಗಿದ್ದೇವೆ. ಈ ಆದಿ ಸಮಯದಲ್ಲಿ ಪೊಂತ, ಬಿಥಾನ್ಯ ಅಥವಾ ಕಪ್ಪದೋಕ್ಯಗಳಲ್ಲಿ ಯಾವ ಕಾರ್ಯವು ಆಗಿದಿಲ್ಲ ಎಂದು ನಾವು ತಿಳಿದಿದ್ದೇವೆ. ವಿಶಾಲವಾಗಿ ಹರಡಿದ ಭಾಗವಾದ ಈ ಪ್ರಾಂತ್ಯಗಳಲ್ಲಿ ಪೇತ್ರನು ತಾನೇ ಕಾರ್ಯಮಾಡಿದನು ಎಂಬುದು ಸಾಧ್ಯವಾದದ್ದಾಗಿದೆ. ಸಂಪೂರ್ಣ ಪ್ರಾಂತ್ಯದಲ್ಲಿನ ಕ್ರೈಸ್ತರಾದಂತವರು ತನ್ನ ವಾಕ್ಯವನ್ನು ಕೇಳಬೇಕು ಎಂದು ಅಪೊಸ್ತಲನು ಬಯಸುವವನಾಗಿದ್ದನು.

*Parepidēmos* ಪದದ ಬಳಕೆಯು, **ಎಂಬ ಸೀಮೆಗಳಲ್ಲಿ** ಎಂದು ಭಾಷಾಂತರವಾಗಿದ್ದು, ಹಳೆಯ ಒಡಂಬಡಿಕೆಯಲ್ಲಿ ಆಳವಾಗಿರುವ ಅಂಶದಲ್ಲಿ ಬೇರುಬಿಟ್ಟಿದ್ದಾಗಿದೆ. 1:17ರಲ್ಲಿ ಪೇತ್ರನು "ಈ ಲೋಕದಲ್ಲಿ ಇರುವದು" ಎಂದು ತನ್ನ ಓದುಗರಿಗೆ ಮಾತನಾಡುವವನಾಗಿದ್ದಾನೆ *(paroikia)*. 2:11ರಲ್ಲಿ ಆ ಅಂಶವನ್ನು *paroikos* ಮತ್ತು ಎಂಬೆರಡಕ್ಕೂ ಬಳಸುತ್ತಾ "ಪ್ರವಾಸಿಗಳು ಪರದೇಶಸ್ಥರು" ಎಂದು ಸೂಚಿಸಿದ್ದಾನೆ. ಈ ಅಂಶವು ಅಬ್ರಹಾಮನು ಕಾನಾನಿನಲ್ಲಿ ಅಲೆಮಾರಿಯಾಗಿ ಜೀವಿಸಿದ್ದ ಕಾಲದೆಡೆಗೆ ಹೋಗುವುದಾಗಿದೆ. ಸರಳ ಮೃತಿ ಹೊಂದಿದಾಗ ಆತನಿಗೆ ಅವಳನ್ನು ಹೂಳನ್ನು ಸ್ಥಳವಿರಲಿಲ್ಲ. ಆತನು ಆ ಜನಗಿಗೆ, "ನಾನು ನಿಮ್ಮಲ್ಲಿ ಪರದೇಶದವನೂ ಪರವಾಸಿಯೂ ಆಗಿದ್ದೇನೆಷ್ಟೇ" ಎಂದು ಹೇಳಿದನು (ಆದಿಕಾಂಡ 23:4; ನೋಡಿರಿ ಇಬ್ರಿಯ 11:13). ಆ ಅಂಶವು "ಪರದೇಶಿಗಳು ಮತ್ತು ಪರವಾಸಿಗಳು" ಎಂದು ಕರೆಯಲ್ಪಡುವಂಥ ಇಸ್ರಾಯೇಲ ಜನರೊಂದಿಗೆ ಮುಂದುವರೆಯಿತು (ಯಾಜಕಕಾಂಡ 25:23; ನೋಡಿರಿ ಕೀರ್ತನೆ 39:12). ಯೇಸುವಿಗೆ ಸಂಬಂಧಿಸಿದವರು ಜಗತ್ತಿನಲ್ಲಿರುವಂಥ ನಿಶ್ಚಿಂತರಾಗಿರುವವರಲ್ಲ ಎಂಬ ಪೇತ್ರನ ಮಾತನ್ನು ನೆನಪಿಸುವವು ಆಗಿವೆ. ಅವರು ಸಂಚರಿಸುವ ಯಾತ್ರಿಕರು ಆಗಿದ್ದಾರೆ. ಕ್ರೈಸ್ತರಿಗಿರುವ ಎಚ್ಚರಿಕೆ ಎಂದರೆ ಅವರು ಈ ಜಗತ್ತಿನೊಂದಿಗೆ ಹೆಚ್ಚಿನ ಸಂಪರ್ಕವನ್ನು ಇಟ್ಟುಕೊಳ್ಳಬಾರದು ಎಂಬುದೇ ಆಗಿದೆ. ಕರ್ತನು ಮಹಿಮೆಯೊಡನೆ ಮರಳಿ ಬರುವಾಗ ಅವರ ಶಾಶ್ವತವಾದ ಮನೆಯು ಪ್ರಕಟಗೊಳ್ಳುವದಾಗಿದೆ.

1 ಪೇತ್ರ ಮತ್ತು ಯಾಕೋಬ ಎರಡು ಪತ್ರಿಕೆಗಳು **ಚದರಿರುವ** ಅಥವಾ "ಬೇರೆಯಾದ"ವರನ್ನು *(diaspora)* ಸಂಬೋಧಿಸುವಂತವು ಆಗಿವೆ. ಈ ಪದವು ಕಂಡು ಬರುವ ಹೊಸ ಒಡಂಬಡಿಕೆಯ ಇನ್ನೊಂದು ಸ್ಥಳ ಎಂದರೆ ಅದು ಯೋಹಾನನ ಸುವಾರ್ತೆಯು ಆಗಿದ್ದು (7:35), ಇದು ಪಾಲೇಸ್ತೀನಿಂದ ಹೊರಗೆ ಇರುವಂಥ ಮತ್ತು ಗ್ರೀಕ್ ಭಾಷೆಯನ್ನು ಮಾತನಾಡುವಂಥ ಜನರಿಗಾಗಿ ಮಾಡಿದ್ದು ಆಗಿದೆ. ಗ್ರೀಕ್ ಮಾತನಾಡುವ ಯೆಹೂದಿಗಳೊಳಗೆ ವಿಸ್ತೃತವಾಗಿ ಬಳಕೆಯಾಗುವಂತಹ, ಹಳೆ ಒಡಂಬಡಿಕೆಯ ಗ್ರೀಕ್ ಭಾಷಾಂತರದಲ್ಲಿ, ಸೆಪ್ಟುಜೆಂಟ್ (LXX), "diaspora" ಎಂಬುದು ಅನ್ಯಜನಾಂಗದೊಳಗೆ ಹರಡಿದ ಇಸ್ರಾಯೇಲರಿಗೆ ಬಳಕೆಯಾಗಿದೆ (ಧರ್ಮೋಪದೇಶಕಾಂಡ 28:25; ಯೆರಮೀಯ 41[34]:17). ಪೇತ್ರ ಮತ್ತು ಯೋಹಾನ ಇಬ್ಬರಿಗೂ "ಚದುರಿರುವವರು" ಕ್ರೈಸ್ತರಾಗಿದ್ದು ಗ್ರೀಕೋ ರೋಮನ್ ಜಗತ್ತಿನೊಳಗೆ ಹರಡಿರುವವರು ಆಗಿದ್ದರು, ಆದರೆ ಇದು ಅದಕ್ಕಿಂತಲೂ ಹೆಚ್ಚಿನದಾಗಿತ್ತು. ತನ್ನ ಓದುಗರು ತಮ್ಮ ವಿಶ್ರಾಂತ ಸ್ಥಳದಿಂದ ಬೇರೆಯಾಗಿದ್ದಾರೆ ಎಂದು ಪೇತ್ರನು ಅರಿತುಕೊಂಡಿದ್ದನು. ಅವರು ತಮ್ಮ ಬಿಡುಗಡೆಯ ದಿನಕ್ಕಾಗಿ ಕಾಯುವವರಾಗಿದ್ದರು. "ಸಭೆಯು ಅನ್ಯದೇಶದಲ್ಲಿ ಚದುರಿಹೋಗಿರುವವರಿಗೆ" ಸಂಭೋಧಿಸಿದಾಗ (ಯಾಕೋಬ

1:1; 1 ಪೇತ್ರ 1:1) ಎಂದು Paul S. Minear ರವರು ಸರಿಯಾಗಿ ಗಮನಿಸಿದ್ದು, ಕ್ರೈಸ್ತರ ಅನುಪಸ್ಥಿತಿಯು ಪಾಲೇಸ್ತೀನಿಂದ ಆದರೆ ಪರಲೋಕಿಯ ಪಟ್ಟಣದಿಂದ ಎಂಬುದು ಲೇಖಕರ ಮನದಲ್ಲಿ ಇಲ್ಲ.[2] ಕ್ರಿಸ್ತನನ್ನು ಅರಿಯುವದು ಎಂದರೆ ಕರ್ತನಿಗೆ ಮೆಚ್ಚಿಕೆಯಾಗಿರುವದು ಮತ್ತು ಈ ಕಾಲದ ಜನರನ್ನು ಸೆಳೆಯುವದು ಹಾಗು ಮೆಚ್ಚಿಸುವದು ಅದರಿಂದ ದೂರವಿರಿಸುವದು ಎಂಬರ್ಥವಾಗಿದೆ.

ಪೇತ್ರನ ಪತ್ರವು ಯಾಕೋಬನ ಪತ್ರದಿಂದ ಭಿನ್ನವಾಗಿದ್ದು ಅನ್ಯಜನಾಂಗದವರು ತನ್ನ ಓದುಗರಲ್ಲಿ ಇರುವುದನ್ನು ಪೇತ್ರನು ಬಯಸುವವನಾಗಿದ್ದಾನೆ (1:14, 18ರ ಮೇಲಿನ ವ್ಯಾಖ್ಯಾನವನ್ನು ನೋಡಿರಿ). ವಿಷಯದ ಮೇಲೆ ವಿಭಿನ್ನವಾದ ಅಭಿಪ್ರಾಯಗಳು ಇರುವುದರಿಂದ, ಯಾಕೋಬನು ತನ್ನ ಓದುಗರಲ್ಲಿ ಯಾರಾದರು ಅನ್ಯಜನಾಂಗದವರು ಇರಬೇಕೆಂದು ಬಯಸುವವನಾಗಿದ್ದನು ಎಂದು ಕಂಡುಬರುವದಿಲ್ಲ. ಪೇತ್ರನು ತನ್ನನ್ನು ತಾನು ಕೊಟ್ಟಿರುವ ಭೌಗೋಳಿಕ ಪ್ರದೇಶಗಳುದ್ದಕ್ಕೂ ಚದುರಿಹೋಗಿರುವಂಥವನು ಎಂದು ಸಂಬೋಧಿಸಿಕೊಂಡಿದ್ದರಲ್ಲಿ ಪೇತ್ರನು ಸಹ ಯಾಕೋಬನಿಂದ ಬೇರೆಯಾಗಿದ್ದಾನೆ. ಪೇತ್ರನಿಗೆ "ಚದುರಿಹೋಗಿರುವವರು" ಆತನು ಹೆಸರಿಸಿದ ರೋಮಾ ಪ್ರಾಂತ್ಯದ ಉದ್ದಕ್ಕೂ ಇರುವ ಯೆಹೂದ್ಯರು ಮತ್ತು ಅನ್ಯಜನಾಂಗದ ವಿಶ್ವಾಸಿಗಳು ಆಗಿದ್ದಾರೆ. ಈ ಪದಪುಂಜವು ಕ್ರೈಸ್ತರಿಗೆ ಉಪಮೇಯವಾಗಿದೆ. ಯಾಕೋಬನಿಗೆ, "ಚದುರಿಹೋಗಿರುವವರು" (ಅಥವಾ "ಹತ್ತಿಕ್ಕಲ್ಪಟ್ಟವರು") ವಿಶೇಷವಾಗಿ ಯೆಹೂದಿ ಕ್ರೈಸ್ತರಾಗಿದ್ದಾರೆ. ಯಾಕೋಬನು ಈ ಪದವನ್ನು ತಾಂತ್ರಿಕ ರೀತಿಯಲ್ಲಿ ಬಳಸಿದ್ದು ಯೆಹೂದ್ಯರಿಗಾಗಿ ಬಳಸಿದ್ದಾನೆ. ಆತನು ಇದನ್ನು ಕಾನಾನಿನಲ್ಲಿ ವಾಸಿಸಿದ ಯೆಹೂದ್ಯರಿಗಾಗಿ ಇದನ್ನು ಸಂಭೋಧಿಸಿದ್ದಾನೆ.

ಪೇತ್ರನು ತನ್ನ ಓದುಗರನ್ನು ಎರಡು ಪದಗಳಿಂದ ವರ್ಣಿಸಿದ್ದು, ಅವುಗಳಲ್ಲಿ ಪ್ರತಿಯೊಂದು ಆತ್ಮೀಕ ಅರ್ಥವನ್ನು ಹೊರಹೊಮ್ಮಿಸುವವು ಆಗಿವೆ. ಆತನು ಅವರನ್ನು "ಪರದೇಶಿಗಳು" ಎಂದು ಕರೆಯುತ್ತಾನೆ ಮತ್ತು ಅವರನ್ನು "ಆರಿಸಲ್ಪಟ್ಟವರು" ಎಂದು ಆತನು ಕರೆಯುತ್ತಾನೆ. ಎರಡು ಪದಗಳಲ್ಲಿ ಹೊರಹೊಮ್ಮುವ ಶ್ರೀಮಂತಿಕೆಯು ಹಳೆಯ ಒಡಂಬಡಿಕೆಯಲ್ಲಿ ಅವುಗಳ ಬಳಕೆಯಿಂದ ಬಂದದ್ದಾಗಿದೆ. ಇದು ಕೇವಲ ಇಸ್ರಾಯೇಲರಲ್ಲಿ ತನ್ನ ಬೇರುಗಳನ್ನು ಕ್ರೈಸ್ತತ್ವದಲ್ಲಿ ಹೊಸೆಯುವ ತಂತಿಗಳನ್ನು ಸೇರಿಸುವ ಹಳೆಯ ಒಡಂಬಡಿಕೆಯಲ್ಲಿನ ಆತನ ಉದಾಹರಣೆಯಲ್ಲ. ಪೇತ್ರನ ವಿಚಾರವು ಹಳೆಯ ಒಡಂಬಡಿಕೆಯಲ್ಲಿ ನೆಲೆಯೂರಿದೆ. ಅಪೊಸ್ತಲನು ಪ್ರಮುಖವಾದ ಪದಗಳನ್ನು, ಅಂಶಗಳನ್ನು, ಮತ್ತು ಪ್ರವಾದಿಗಳು ಪ್ರಕಟಿಸುವವನಾಗಿದ್ದಾನೆ. ಈ ರೀತಿಯಲ್ಲಿ, ಹಳೆಯ ಒಡಂಬಡಿಕೆಯ ಮೇಲಿನ ಪದಗಳನ್ನು ಮತ್ತು ವಿಷಯಗಳನ್ನು ಕ್ರೈಸ್ತೀಯ ಬಣ್ಣವನ್ನು ಅವುಗಳಿಗೆ ಪ್ರತ್ಯೇಕವಾಗಿ ಕೊಡುವ ಮೂಲಕ ವಿಸ್ತರಿಸುವವನಾಗಿದ್ದಾನೆ.

"ಪರದೇಶಸ್ಥರು" ಎಂಬುದರ ಮೇಲಿನ ಪ್ರತ್ಯೇಕವಾಗಿರುವವರು ಮತ್ತು 1:17ರಲ್ಲಿ ಮತ್ತು 2:11ರಲ್ಲಿ ಕಂಡುಬರುವಂಥ ಅವುಗಳ ಸಮಾನಪದಗಳೊಡನೆ ಸಮೀಪವಾಗಿ ಬರುವವರು ಆಗಿರೋಣ. ಒಂದು ಕ್ಷಣ ನಾವು **ಆರಿಸಿಕೊಳ್ಳಲ್ಪಟ್ಟವರು** ಎಂಬ ಪದವನ್ನು ಪರೀಕ್ಷಿಸೋಣ. "ಆರಿಸಲ್ಪಟ್ಟವರು" ಎಂಬ ಪದವನ್ನು ಬಿಟ್ಟರೆ ಯೆಹೂದ್ಯರಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳಲು ಬೇರೆಯಾವ ಮಹತ್ವದ ಪದವೂ ಇರಲಿಲ್ಲ. ಅವರು ದೇವರಿಂದ ಆರಿಸಲ್ಪಟ್ಟವರು ಆಗಿದ್ದಾರೆ. ಅರಣ್ಯದಲ್ಲಿ, "ಆತನು ನಿಮ್ಮ ಪಿತೃಗಳನ್ನು ಪ್ರೀತಿಸಿ ಅವರ ತರುವಾಯ ಅವರ ಸಂತತಿಯವರಾದ ನಿಮ್ಮನ್ನು ಆದುಕೊಂಡು ..." ಎಂದು ಮೋಶೆಯು ಇಸ್ರಾಯೇಲ್ಯರಿಗೆ ಹೇಳಿದನು (ಧರ್ಮೋಪದೇಶಕಾಂಡ 4:37). "... ಆತನು ನಿಮ್ಮ ಪಿತೃಗಳಲ್ಲಿ ಇಷ್ಟವುಳ್ಳವನಾಗಿ ಅವರನ್ನು ಪ್ರೀತಿಸಿದರಿಂದ ಈಗ ನಿಮ್ಮ ಅನುಭವಕ್ಕೆ ಬಂದಂತೆ ಅವರ ತರುವಾಯ ಅವರ ಸಂತತಿಯರಾದ ನಿಮ್ಮನ್ನೇ ಎಲ್ಲಾ ಜನಾಂಗಗಳೊಳಗಿಂದ ಆದುಕೊಂಡನು" ಎಂದು ಧರ್ಮೋಪದೇಶಕರು ಸೇರಿಸಿದ್ದಾರೆ (ಧರ್ಮೋಪದೇಶಕಾಂಡ

10:15).

"ಆದುಕೊಂಡವರು" ಎಂಬ ಪದವು ನಿರ್ದಿಷ್ಟವಾಗಿ ಯೆಹೂದಿಗಳಿಗೆ ಬಳಸಲ್ಪಟ್ಟದ್ದರಿಂದ (ಕೀರ್ತನೆ 105:6), ದಾವೀದನ ಅಡಿಯಲ್ಲಿ ಇರುವ ರಾಜಕೀಯವಾಗಿ ಅಸ್ತಿತ್ವದಲ್ಲಿ ಇಲ್ಲದ ವಸ್ತುಗಳಿಗಾಗಿ ಮತ್ತು ಆತನ ಸಂತಾನದವರು ಹಾಗೂ ಇತ್ತೀಚೆಗೆ ಮಕ್ಕೆಬೀಯರು ಮತ್ತು ಅವರ ಸಂತತಿಯವರಿಗೆ ಮತ್ತು ಕ್ರಿಸ್ತನ ಸಂದೇಶವು ಎಲ್ಲಾ ರಾಷ್ಟ್ರದವರಿಗೆ ಇರುವದರಿಂದ (ಮತ್ತಾಯ 28:19), ಕ್ರೈಸ್ತರು "ಆರಿಸಲ್ಪಟ್ಟವರು" ಎಂಬ ಪದದಿಂದ ಬಹಿಸ್ಕರಿಸಲ್ಪಟ್ಟವರಿಗಾಗಿ ಎಂದು ಯೋಚಿಸುವವರಿಗೆ ಆಗಿವೆ. ಸ್ಪಷ್ಟವಾಗಿ ಅವರು ಆಗಿರುವದಿಲ್ಲ. ಯೇಸು ಕ್ರಿಸ್ತನ ಸಭೆಯು ಇಸ್ರಾಯೇಲರ ಆತ್ಮೀಕ ವಿಸ್ತೀರ್ಣತೆಯನ್ನು ನಿರ್ದೇಶಿಸುವುದಾಗಿದೆ. ಗ್ರೀಕ್ ಪದವಾದ *eklektos* "ಆರಿಸು" ಅಥವಾ "ಆರಿಸಲ್ಪಡು" ವಿಭಿನ್ನವಾಗಿ ಭಾಷಾಂತರಿತವಾಗಿದೆ. ಪೌಲನಾಗಲೀ (ರೋಮಾಪುರ 8:33; ಕೊಲಸ್ಸೆ 3:12; ತೀತ 1:1) ಪೇತ್ರನಾಗಲೀ ತನ್ನ "ಆರಿಸಲ್ಪಟ್ಟ" ದೇವರನ್ನು ಅವರು ಮರೆತುಬಿಡುವದನ್ನು ಒಪ್ಪಲಾರರು.

ಕ್ರೈಸ್ತರು ತಾವು ಕ್ರಿಯಾಶೂನ್ಯರಾಗಿರುವೆಡೆಯಲ್ಲಿ ಆರಿಸಲ್ಪಡುವ ಯೋಚನೆಯಲ್ಲಿ ಒಳಗಾಗಬಹುದು. ಒಬ್ಬನು ಏನು ಮಾಡದಿರಬಹುದು; ಆತನು ಕೇವಲ ಸುಮ್ಮನೇ ಕೂತುಕೊಳ್ಳಬಹುದು ಮತ್ತು ದೇವರು ಆತನನ್ನು ಆರಿಸಿಕೊಳ್ಳಲು ಒಪ್ಪುವವನಾಗಿದ್ದಾನೆ. ಕೆಲವರು ಹೃದಯದ ಎಚ್ಚರಿಗೊಳ್ಳುವಿಕೆಯ ಆತ್ಮೀಕತೆಯೊಡನೆ ಇದ್ದು - ಆತನು ರಕ್ಷಿಸಲ್ಪಟ್ಟದ್ದನ್ನು ಬಲ್ಲಂಥವರಿಂದ ಮತ್ತು ಮುಂದೆ ದೇವರಿಗೆ ಒಳಪಟ್ಟವರ ಮೂಲಕ ಅನುಭವವ ಹೊಂದಿದವನಾಗಿರುತ್ತಾರೆ. ತತ್ವಗಳೊಡನೆ ಇರುವವನು ಅಸಂಖ್ಯವಾದ ಜನರನ್ನು ದೇವರು ನಿತ್ಯತ್ವದಿಂದ ರಕ್ಷಿಸುವವರಾಗಿದ್ದಾನೆ ಎಂಬುದನ್ನು ಕಾದುಕೊಂಡುವವನಾಗಿರುತ್ತಾನೆ. ಆದ್ದರಿಂದ ಜಗತ್ತಿನೊಳಗೆ ಆರಿಸಲ್ಪಟ್ಟಿರಲಿ ಅಥವಾ ಆರಿಸಲ್ಪಡದೆ ಇರಲಿ ಒಬ್ಬನು ಹುಟ್ಟಿದ್ದಾನೆ ಎಂದು ಅದು ಹೇಳುತ್ತದೆ. ದೇವರ ಸಾರ್ವಭೌಮತ್ವದಿಂದ, ನಿತ್ಯ ನ್ಯಾಯತೀರ್ಪಿನಿಂದ ಒಬ್ಬನು ಆರಿಸಲ್ಪಡಲಿ ಅಥವಾ ಆರಿಸಲ್ಪಡದೇ ಇರುವದರಿಂದ, ಆತನು ತನ್ನ ಸ್ಥಿತಿಯನ್ನು ಬದಲಾಯಿಸಲು ಏನನ್ನು ಮಾಡಲಿಕ್ಕಾಗುವದಿಲ್ಲ.

ಇಂಥ ಅಂಶಗಳು ಜನರ ಅಂಶಗಳನ್ನು ನಿರ್ಲಕ್ಷಿಸುವವು ಆಗಿದ್ದು ವ್ಯಕ್ತಿಗಳ ಮೇಲೆ ಬಲುವಾಗಿ ಕೇಂದ್ರಿಕರಿಸುವವು ಆಗಿವೆ. "ಈ ರೀತಿಯಲ್ಲಿ ಹೇಳುವ ಮೂಲಕ ಸಭೆಯು ಅಸ್ಥಿತ್ವದಲ್ಲಿ ತರುವದರಲ್ಲಿ ಆತನು ಮಧ್ಯಸ್ಥಿಕೆಯನ್ನು ಆತನು ವಹಿಸುವವನಾಗಿದ್ದಾನೆ." ಈ ಪ್ರಕರಣದಲ್ಲಿ, I. Howard Marshall ರವರು ದೇವರ ಸಂಬನಾರ್ಥಕ ಜ್ಞಾನದ ಬಗ್ಗೆ ಹೇಳಿದಾಗ ಆತನು ಸರಿಯಾಗಿದ್ದನು.[3] ಆಯ್ಕೆಯಾದ ಜನರ ಬಗೆಗಿನ ಪರಿಕಲ್ಪನೆಯು ಹಳೆಯ ಒಡಂಬಡಿಕೆಯಿಂದ ಎದ್ದದ್ದಾಗಿದೆ. ಇಸ್ರಾಯೇಲ್ ಒಂದು ರಾಷ್ಟ್ರವಾಗಿ ಆರಿಸಲ್ಪಟ್ಟಿತ್ತು, ಆದರೆ ಕೆಲ ವಿಚಾರಗಳಲ್ಲಿ ಪ್ರತಿಯೊಬ್ಬ ಇಸ್ರಾಯೇಲ್ಯರು ಗಂಭೀರವಾದ ದೈವದ್ರೋಹಿಗಳು ಆಗಿದ್ದರು. ವೈಯಕ್ತಿಕ ದೈವದ್ರೊಹವು ಆರಿಸಲ್ಪಟ್ಟ ಜನರ ಸ್ಥಿತಿಗೆ ವೇದಿಯಾಗಿರಲಿಲ್ಲ. ವ್ಯಕ್ತಿಗತವಾಗಿ ಅವರು ದೇವರ ಸನ್ನಿಧಾನದಿಂದ ಎಂದೆಂದಿಗೂ ಕಡಿದುಕೊಳ್ಳಬಹುದಾಗಿದೆ, ಆದರೆ ಇಸ್ರಾಯೇಲರು ಇನ್ನೂ ಆರಿಸಲ್ಪಟ್ಟವರಾಗಿದ್ದಾರೆ.

ಅದೇ ರೀತಿಯಲ್ಲಿ, ಸಭೆಯು, ಇಸ್ರಾಯೇಲ್ಯರ ಆತ್ಮೀಕ ಬಾಧ್ಯತೆಯ ಆರಿಸಲ್ಪಟ್ಟ ಸ್ಥಿತಿಯನ್ನು "ಆರಿಸಲ್ಪಟ್ಟ" ಎಂಬ ಹಿರಿಮೆಯನ್ನು ಅನುಭವಿಸುವದಾಗಿದೆ. ಸಭೆಯಲ್ಲಿ ವ್ಯಕ್ತಿಯ ಪಾಲು ತೆಗೆದುಕೊಳ್ಳುವಿಕೆಯು ಮತ್ತು ಆರಿಸಲ್ಪಟ್ಟವರೊಳಗೆ ಆತನ ನಂಬಿಕೆಯು ಕಾರ್ಯೋನ್ಮುಖವಾಗಲು ಆಗ್ರಹಿಸಿದಾಗ ಇದು ಇರುವುದಾಗಿದೆ. ಅಲ್ಲಿ ದೇವರ ಕರೆಯಲ್ಲಿ ಯಾವುದೇ ರೀತಿಯ "ದುಸ್ತರವಾದ ಕೃಪೆಯು" ಇರುವದಿಲ್ಲ. ರಕ್ಷಣೆಯ ಸಾರ್ವತ್ರಿಕ ಕರೆಯಲ್ಲಿ ವ್ಯಕ್ತಿಯ ಪಾಲ್ಗೊಳ್ಳುವಿಕೆಯು ಆರಿಸಲ್ಪಡುವಿಕೆಯ ಪ್ರತಿಕ್ರಿಯೆಯಲ್ಲಿ ಸಕಾರಾತ್ಮಕ ವಾದದ್ದಾಗಿದೆ. "ಪವಿತ್ರಾತ್ಮನಿಂದ ಶುದ್ಧೀಕರಿಸಲ್ಪಟ್ಟವರಾಗಿ ಸತ್ಯದ ಮೇಲೆ ನಂಬಿಕೆಯನ್ನಿಟ್ಟು ರಕ್ಷಣೆಯನ್ನು ಪಡೆಯುವದಕ್ಕಾಗಿ ದೇವರು ನಿಮ್ಮನ್ನು ಆದಿಯಿಂದ ಆರಿಸಿಕೊಂಡಿರುವದರಿಂದ

… ದೇವರು ಸುವಾರ್ತೆಯ ಮೂಲಕವಾಗಿ ನಿಮ್ಮನ್ನು ಕರೆದನು" ಎಂದು ಪೌಲನು ಬರೆಯುತ್ತಾನೆ (2 ಥೆಸಲೋನಿಕ 2:13, 14). ಒಬ್ಬನು ತನ್ನ ಹೊರೆಯನ್ನು ಎಸೆಯುವುದರೊಡನೆ ಆತನು "ಆರಿಸಲ್ಪಟ್ಟ" ಸುವಾರ್ತೆಯ ಸಂದೇಶವನ್ನು ಕೇಳುವಾಗ, ಅದು ಘೋಷಿಸುವದನ್ನು ನಂಬುವನು ಮತ್ತು ಅದಕ್ಕೆ ವಿಧೇಯನಾಗುವನು. ತನ್ನ ಕೃಪೆಯ ಮೂಲಕ ಯಾರ ನಂಬಿಕೆಯು ವಿಧೇಯರಾಗುವದಕ್ಕೆ ಆಗ್ರಹಿಸುವದಾಗಿದೆಯೋ ಅವರನ್ನು ದೇವರು ಆರಿಸುವವನಾಗಿದ್ದಾನೆ (ಎಫೆಸ 2:8). ಆರಿಸಲ್ಪಟ್ಟವರು ಕ್ರಿಸ್ತನಿಗೆ ಸಂಬಂಧಿಸಿದ ಸಭೆಗೆ ಸೇರಿಸಲ್ಪಟ್ಟವರಾಗಿದ್ದಾರೆ (ಅಪೊಸ್ತಲರ ಕೃತ್ಯಗಳು 2:47).

**ವಚನ 2.** ಪೇತ್ರನು ತನ್ನ ಕೇಳುಗರ ವಿವರಣೆಯನ್ನು ಮುಂದುವರೆಸುತ್ತಾ ಹೋಗುತ್ತಾನೆ. ಅವರಿಗೆ, ತಾವು ಯಾರು, ಕ್ರಿಸ್ತನನ್ನು ಅಪ್ಪಿಕೊಳ್ಳುವದು ಎಂದರೇನು ಎಂಬುದರ ವಿವರವಾದ ಅರಿತುಕೊಳ್ಳುವಿಕೆಯು ಅವರಿಗೆ ಅವಶ್ಯವಾಗಿತ್ತು. ಅವರ ಆರಿಸಲ್ಪಟ್ಟ ಜನರಾಗಿರುವಿಕೆಯು **ತಂದೆಯಾದ ದೇವರ ಭವಿಷ್ಯದ್ ಜ್ಞಾನಾನುಸಾರವಾಗಿ** ಆಗಿತ್ತು. ಅವರು ವಿಗ್ರಹಾರಾಧಕ ಅಥವಾ ಯೆಹೂದಿ ಹಿನ್ನಲೆಯವರಿರಲಿ, ಇಸ್ರಾಯೇಲನ್ನು ತನ್ನಲ್ಲಿ ಪ್ರಕಟಪಡಿಸಿದ ದೇವರು, ನಜರೇತಿನ ಯೇಸುವನ್ನು ತನ್ನಲ್ಲಿ ಪ್ರಕಟಪಡಿಸಿದನು ಎಂದು ಅರಿತುಕೊಳ್ಳಬೇಕು ಇದು ಕ್ರೈಸ್ತರಿಗೆ ಪ್ರಮುಖವಾದದ್ದೆಂದು ಪೇತ್ರನು ತಿಳಿದಿದ್ದನು. ಯೇಸುವನ್ನು ಬೋಧಿಸುವದು ಹೊಸ ದೇವರನ್ನು ಘೋಷಿಸುವದು ಎಂದಲ್ಲ. ಮುಂದೆ, ಸಭೆಯ ಸಂಸ್ಥಾಪನೆಯು ಜಗತ್ತಿನ ಮೇಲೆ ಸುರಿಸಿದ ಹೊಸ ಯೋಜನೆಯಲ್ಲ. ಯೇಸು ಕ್ರಿಸ್ತನಲ್ಲಿ ತಮ್ಮ ನಂಬಿಕೆಯನ್ನು ಅರಿಕೆಮಾಡಿದ ಎಲ್ಲರೂ ಆತನ "ಆರಿಸಿಕೊಂಡವರನ್ನು" ಒಳಗೊಂಡಾಗ ದೇವರ ಉದ್ದೇಶವು, ಆದಿಕಾಲದಿಂದಲೂ ಮೊದಲೇ ತಿಳಿದದ್ದೂ ಎಂದು ತಿಳಿದುಬರುವದಾಗಿದೆ.

ಹೊಸ ಒಡಂಬಡಿಕೆಯ ಪ್ರೇರೇಪಿತ ಲೇಖಕರು ದೇವರ "ಭವಿಷ್ಯದ್ ಜ್ಞಾನದ" ಬಗ್ಗೆ ಬರೆಯುವಾಗ ಆ ವಿಷಯವು ಸಮಯದಿಂದ ಸಮಯಕ್ಕೆ ಆತನ ಮಗನಲ್ಲಿ ಪ್ರಕಟವಾದ ರಕ್ಷಣೆಯ "ಭವಿಷ್ಯದ್ ಜ್ಞಾನವೇ" ಆಗಿವೆ ಎಂದರು. ಇದು ಹೊಸ ಇಸ್ರಾಯೇಲಿಗೆ ಆತನ ಸಭೆಗೆ ಸಂಬಂಧಿಸಿದ ಭವಿಷ್ಯತ್ ಜ್ಞಾನವೇ ಆಗಿದೆ. ಹೊಸ ಒಡಂಬಡಿಕೆಯು ವ್ಯಕ್ತಿಯು ನಿತ್ಯದ ಗುರಿಯಾದ ದೇವರ ಭವಿಷ್ಯತ್ ಜ್ಞಾನಕ್ಕೆ ಸಂಬಂಧಿಸಿಲ್ಲ ಎಂಬದು ನಕಾರಾತ್ಮಕವಾದ ಹೇಳಿಕೆಯಾಗಿದೆ. ಸಭೆಯು ದೇವರೊಡನೆ ಇದ್ದ ನಂತರದ ಆಲೋಚನೆಯಲ್ಲ ಎಂದು ತನ್ನ ಓದುಗರು ತಿಳಿಯಬೇಕೆಂದು ಪೇತ್ರನು ಬಯಸಿದ್ದನು. ಇದು ಎಂದೆಂದಿಗೂ ದೇವರ ಮನದಲ್ಲಿ ಇತ್ತು. ಇಸ್ರಾಯೇಲರನ್ನು ಮಾತ್ರ ಒಳಗೊಂಡ ಆರಿಸಲ್ಪಟ್ಟ ಜನರು ಅಷ್ಟೇ ಅಲ್ಲ ಆದರೆ ಎಲ್ಲಾ ಜನಾಂಗದವರು ಯೇಸು ಕ್ರಿಸ್ತ ಸಭೆಯು ಇರಬೇಕೆಂದು ದೇವರು ಮೊದಲೇ ಅರಿತಿದ್ದನು ಮತ್ತು ಮೊದಲೇ ನಿರ್ಧರಿಸಿದ್ದನು. ಇದಕ್ಕೆ ಸಮಾನವಾಗಿ "ನಮ್ಮನ್ನು ಯೇಸುಕ್ರಿಸ್ತನ ಮೂಲಕ ಪುತ್ರರನ್ನಾಗಿ ಸ್ವೀಕರಿಸುವದಕ್ಕೆ … ಸಂಕಲ್ಪಮಾಡಿದ್ದನು" ಎಂದು ಪೌಲನು ಬರೆಯುವಾಗ (ಎಫೆಸ 1:5), ಇಲ್ಲಿ "ನಮ್ಮನ್ನು" ಎಂಬುದು ದೇವರು ಸಂಕಲ್ಪಿಸಿದ ಜನರೇ ಹೊರತು "ನಾವು" ಎಂಬುದು ವ್ಯಕ್ತಿಗತವಲ್ಲ.

**ಪವಿತ್ರಾತ್ಮನಿಂದ ಪ್ರತಿಷ್ಠಿಸಲ್ಪಟ್ಟವರಾಗಿ** ಎಂಬ ಪದವು *(en hagiasmōi pneumatos),* ಅಕ್ಷರಸಹ "ಆತ್ಮನ ಪರಿಶುದ್ಧತೆಯಲ್ಲಿ" ದೇವರ "ಆದುಕೊಂಡವನನ್ನು" ಘೋಷಿಸುವದಾಗಿದ್ದು ಆತ್ಮನ ನಿಯೋಗದಿಂದ ಪರಿಶುದ್ಧರನ್ನಾಗಿ ಮಾಡಲ್ಪಟ್ಟದ್ದಾಗಿದೆ.[4] ಇದೇ ಪದವು 2 ಥೆಸಲೋನಿಕ 2:13ರಲ್ಲಿ ಕಂಡು ಬಂದಿದ್ದು, NASB ಯಲ್ಲಿ "ಆತ್ಮನ ಶುದ್ಧೀಕರಿಸುವಿಕೆಯ ಮೂಲಕ" ಎಂದಿರುವದಾಗಿದೆ. ಆತ್ಮನ ಶುದ್ಧೀಕರಿಸುವಿಕೆಯಲ್ಲಿ ಸುವಾರ್ತೆಯ ಸತ್ಯದ ನಂಬಿಕೆಯೊಡನೆ ಪೌಲನು ಜೋಡಿಸುವವನಾಗಿದ್ದಾನೆ. ಇಬ್ಬರು ಅಪೊಸ್ತಲರು ಒಂದೇ ನೈಜತ್ವವನ್ನು ವಿಭಿನ್ನ ಪದಗಳಲ್ಲಿ ವ್ಯಕ್ತಪಡಿಸಿದ್ದಾರೆ. ವಿಶ್ವಾಸ ಸುವಾರ್ತೆಯ ಕರೆಯನ್ನು ಕೇಳಿ ಮತ್ತು ವಿಧೇಯ ನಾದಾಗ ಆತ್ಮನು ಶುದ್ಧಿಸುವವನಾಗಿದ್ದಾನೆ. ವಿಧೇಯನಾದ ವಿಶ್ವಾಸಿಯಲ್ಲಿ ಆತ್ಮನು ವಾಸಿಸುವವನಾಗಿದ್ದಾನೆ (ಅಪೊಸ್ತಲರ ಕೃತ್ಯಗಳು

2:38) ಮತ್ತು ಆತನನ್ನು ದೈವೀಯ ಜೀವಿತದಲ್ಲಿ ಬೆಂಬಲಿಸುವವನಾಗಿದ್ದಾನೆ. ವಿಶ್ವಾಸಿಯು ತನ್ನ ಜೀವಿತದಲ್ಲಿ ದೇವರ ಸ್ವಂತ ಪರಿಶುದ್ಧತೆಯಲ್ಲಿ ಪ್ರತಿಬಿಂಬಿತನಾದಾಗ "ಪರಿಶುದ್ಧನು" ಎಂದು ಹೇಳಲ್ಪಡುತ್ತಾನೆ (1 ಪೇತ್ರ 1:15, 16). ಆತನು ಪರಿಶುದ್ಧನು ಯಾಕೆಂದರೆ ಆತನು ದೇವರು ಆರಿಸಿಕೊಂಡವನಾಗಿ ಆತ್ಮನಿಂದ ಪ್ರತ್ಯೇಕವಾಗಿ ಇರಿಸಲ್ಪಟ್ಟಿದ್ದಾನೆ.

ವಿಶ್ವಾಸಿಗೆ ಆತನು ಕೊನೆಗೆ **ವಿಧೇಯರಾಗುವದಕ್ಕೂ ಯೇಸು ಕ್ರಿಸ್ತನ ರಕ್ತದಿಂದ ಪ್ರೋಕ್ಷಿತರಾಗುವದಕೂ** ಪರಿಶುದ್ಧತೆಯು ಪರಿಶುದ್ಧಾತ್ಮನಿಂದ ಕೊಡಲ್ಪಡುತ್ತದೆ. NASBಯ ಭಾಷಾಂತರಕಾರರು ಈ ಪದವನ್ನು "ಯೇಸು ಕ್ರಿಸ್ತನನಲ್ಲಿ" *(Iēsou Christou)* ವಿಧೇಯತೆ ಮತ್ತು ಪ್ರೋಕ್ಷಿತವಾಗುವಿಕೆಯ ಜೊತೆ ಎಂಬಂತೆ ರಚಿಸಿದ್ದಾರೆ. ವಿಧೇಯತೆಯನ್ನು ಈಗಿರುವಂತೆ ಒಂದೇ ಅಂಶವಾಗಿ ತೆಗೆದುಕೊಳ್ಳುವದು ಉತ್ತಮವಾದದ್ದು ಆಗಿದೆ. "ವಿಧೇಯತೆಗಾಗಿ ಮತ್ತು ಯೇಸು ಕ್ರಿಸ್ತನ ರಕ್ತವನ್ನು ಪ್ರೋಕ್ಷಿಸುವದಕ್ಕಾಗಿ" ಆತ್ಮನ ಶುದ್ಧೀಕರಿಸುವ ಕಾರ್ಯವು ಇರುವುದಾಗಿದೆ. ಶುದ್ಧೀಕರಿಸುವಿಕೆಯು ಕ್ರೈಸ್ತರ ಮೇಲೆ ಮಾಡಲ್ಪಟ್ಟ ನಿಷ್ಕ್ರಿಯೆಯುಳ್ಳ ಕಾರ್ಯವಲ್ಲ ಎಂದು ತನ್ನ ಓದುಗರಿಗೆ ಪೇತ್ರನು ನೆನಪಿಸುವವನಾಗಿದ್ದಾನೆ. ವಿಶ್ವಾಸಿಯು ತಾನೇ ದೇವರ ಚಿತ್ತವನ್ನು ಅಪ್ಪಿಕೊಳ್ಳುವವನಾಗಿದ್ದಾನೆ ಇದರ ಮೂಲಕ ದೇವರ ಚಿತ್ತವು ಆತನ ಚಿತ್ತವಾಗಿ ಮಾರ್ಪಡುತ್ತದೆ. ಒಂದೆಡೆ, ಹಳೆಯ ಕ್ರಿಸ್ತೀಯ ಗೀತೆಯು ದೃಢಿಕರಿಸುವ ಹಾಗೆ "ನಾನು ತರುವಾಗ ನನ್ನ ಕೈಯಲ್ಲಿ ಏನು ಇರಲಿಲ್ಲ; ಕೇವಲ ನಾನು ಹೊಂದಿಕೊಂಡ ಆ ಕ್ರೂಜೆ"[5] ಎಂಬಂತೆ ಕ್ರಿಸ್ತನು ಶುದ್ಧೀಕರಿಸುತ್ತಾನೆ (1 ಕೊರಿಂಥ 1:30). ಇನ್ನೊಂದೆಡೆಯಲ್ಲಿ, ಶುದ್ಧೀಕರಿಸುವಿಕೆಯು ವಿಶ್ವಾಸಿಯ ಮೇಲೆ ಇಟ್ಟಂಥ ನೈತಿಕ ಪ್ರಾಮುಖ್ಯತೆಯು ಆಗಿದೆ. ಇದು ವಿಧೇಯತೆಯು ಆಗಿದೆ. ಕ್ರೈಸ್ತನಾಗಿರುವದು ಒತ್ತಡದೆಡೆಯಲ್ಲಿ ಜೀವಿಸುವದು ಆಗಿದೆ: (1) ಪರಿಶುದ್ಧೀಕರಿಸುವಂಥವನು ಕ್ರಿಸ್ತನೇ. (2) ಶುದ್ಧೀಕರಿಸುವಿಕೆಯು "ಮಾನವನ ನಿರ್ಧಾರದಂತೆ ಕ್ರಿಸ್ತೀಯ ಸಂದೇಶದ ಮೂಲಕ ಒಪ್ಪಿಕೊಳ್ಳುವದು ಮತ್ತು ಜೀವಿಸುವದು" ಎಂಬುದರಿಂದ ಬರುವದಾಗಿದೆ.[6]

"ಆತನ ರಕ್ತದ ಮೂಲಕ ಪ್ರೋಕ್ಷಿಸಲ್ಪಡು." ಅದೇ ಪ್ರತ್ಯಯದ ಮೂಲಕ ನಡೆಸಲ್ಪಟ್ಟಿದ್ದು, ವಿಶ್ವಾಸಿಗಳ ಶುದ್ಧೀಕರಿಸುವಿಕೆಯು ವಿಧೇಯತೆಗಾಗಿ ಮತ್ತು ಯೇಸು ಕ್ರಿಸ್ತನ ರಕ್ತದ ಮೂಲಕ ಪ್ರೋಕ್ಷಿಸಲ್ಪಡುವದರಿಂದ ಇರುವದಾಗಿದೆ. ಪೇತ್ರನು ಇಸ್ರಾಯೇಲರ ಧಾರ್ಮಿಕ ಜೀವಿತದಲ್ಲಿ ಆಳವಾಗಿ ಬೇರೂರಿದ ಕ್ರಿಸ್ತೀಯ ಹೋಲಿಕೆಯ ಅಂಶಗಳ ಜೊತೆ ಕಠಿಣವಾಗಿ ಜೋಡಿಸುವದನ್ನು ಮುಂದುವರೆಸುವವನಾಗಿದ್ದಾನೆ. ಶುದ್ಧೀಕರಿಸುವಿಕೆಯು ಚಿಕ್ಕ ವಿಷಯವಲ್ಲ ಎಂದು ರಕ್ತವನ್ನು ಚಲ್ಲುವಿಕೆಯು ಇಸ್ರಾಯೇಲರಿಗೆ ನೆನಪಿಸುವದಾಗಿದೆ. ಮೋಶೆಯು ಜನರನ್ನು ಮತ್ತು ವೇದಿಯನ್ನು ಬಲಿಯ ರಕ್ತದಿಂದ ಪ್ರೋಕ್ಷಿಸಿದನು (ವಿಮೋಚನಕಾಂಡ 24:6, 8), ಮತ್ತು ಯಾಜಕರು ವೇದಿಯ ಮೇಲಿನ ರಕ್ತದಿಂದ ಪ್ರೋಕ್ಷಿಸಲ್ಪಟ್ಟರು (ಯಾಜಕಕಾಂಡ 3:2). ಇಬ್ರಿಯದ ಲೇಖಕನು "ಧರ್ಮಶಾಸ್ತ್ರದ ಪ್ರಕಾರ ಸ್ವಲ್ಪಕಡಿಮೆ ಎಲ್ಲಾ ವಸ್ತುಗಳು ರಕ್ತದಿಂದಲೇ ಶುದ್ಧೀಕರಿಸಲ್ಪಡುವವು; ರಕ್ತಧಾರೆಯಿಲ್ಲದೆ ಪಾಪಪರಿಹಾರ ಉಂಟಾಗುವದಿಲ್ಲ" ಎಂದು ಹೇಳಿದ್ದಾನೆ (ಇಬ್ರಿಯ 9:22).

ಒಬ್ಬನು ರಕ್ತದಿಂದ ಶುದ್ಧಿಕರಿಸಲ್ಪಡುವದು ಇದು ಶುದ್ಧವಾಗಿ ಆತ್ಮೀಕವಾದ ಪರಿಕಲ್ಪನೆಯಾಗಿದೆ. ನಿಜವಾದ ಅರ್ಥದಲ್ಲಿ ರಕ್ತಕಲೆಯನ್ನು ಉಂಟುಮಾಡುತ್ತದೆ; ಇದು ಶುದ್ಧವಾಗದು. ನೀರು ಇನ್ನೊಂದೆಡೆಯಲ್ಲಿ, ಶುದ್ಧೀಕರಿಸುವ ಅಂಶವಾಗಿದೆ. ಹೀಗೆ ಮೋಶೆಯ ಧರ್ಮಶಾಸ್ತ್ರವು ಸಹ ನೀರಿನ ಶುದ್ಧೀಕರಿಸುವಿಕೆಯನ್ನು ಬಲ್ಲದ್ದಾಗಿದೆ. ಅರಣ್ಯಕಾಂಡ 19ರಲ್ಲಿ, ಧರ್ಮಶಾಸ್ತ್ರವು ಕೆಂದಾಕಳವನ್ನು ಶಾಸನವನ್ನು ಮುಂದಿಟ್ಟಿದೆ. ಅಶುದ್ಧತೆಯ ಆಚರಣೆಯನ್ನು ಶುದ್ಧೀಕರಿಸಲು ಯಾಜಕರು ಕೆಂದಾಕಳಿನ ಬೂದಿಯಿಂದ ನೀರಿನ ಮಿಶ್ರಣವನ್ನು ಬಳಸುತ್ತಿದ್ದರು: "... ನಾವು ಹೃದಯವನ್ನು ಪ್ರೋಕ್ಷಿಸಿಕೊಂಡು ದೇಹವನ್ನು ತಿಳಿನೀರಿನಿಂದ ತೊಳೆದುಕೊಂಡು ಪರಿಪೂರ್ಣವಾದ ನಂಬಿಕೆಯುಳ್ಳವರಾಗಿ ಯಥಾರ್ಥಹೃದಯವುಳ್ಳವರಾಗಿಯೂ ದೇವರ

ಬಳಿಗೆ ಬರೋಣ" ಎಂದು ಸೇರಿಸುವದರ ಮೂಲಕ ಇದು ಇಬ್ರಿಯ ಲೇಖಕನು ರಕ್ತ ಮತ್ತು ನೀರಿನ ತೊಳೆಯುವಿಕೆಯ ಗಂಭೀರವಾದ ವಿಷಯವು ಆಗಿದೆ (ಇಬ್ರಿಯ 10:22). ಪೇತ್ರನು, ಸಹ ತನ್ನ ಓದುಗರ ಮರುಹುಟ್ಟಿನೆಡೆಗೆ, ಆತನು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದಾಗ ಮರುಹುಟ್ಟಿನ ಅರಿವಿಗೆ ಬೇಗನೇ ಬರುವವನಾಗಿದ್ದಾನೆ.

ಈ ಕೆಲ ಮಾತುಗಳೊಡನೆ, ಅಪೊಸ್ತಲನು ತಂದೆಯಾದ ದೇವರ, ಮಗನಾದ ಯೇಸು ಕ್ರಿಸ್ತನ, ಮತ್ತು ದೇವರ ಶುದ್ಧೀಕರಿಸುವಿಕೆಯ ನಿಯೋಗವಾದ ಪರಿಶುದ್ಧಾತ್ಮನ ಆಶೀರ್ವಾದಗಳಿಗಾಗಿ ಬೇಡಿಕೊಳ್ಳುವವನಾಗಿದ್ದಾನೆ. ದೇವರು ಒಬ್ಬನೇ ಎಂದು ಕ್ರೈಸ್ತರು ದೃಢೀಕರಿಸುವವರಾಗಿದ್ದಾರೆ ಆದರೆ ಆತನ ಆ ಒಂದಾಗಿರುವಿಕೆಯು ಮೂರು ವ್ಯಕ್ತಿಗಳಲ್ಲಿ ಅವಿರ್ಭವಿಸುವುದಾಗಿದೆ: ತಂದೆ, ಮಗನು, ಮತ್ತು ಪರಿಶುದ್ಧಾತ್ಮನು. ಯೆಹೂದ್ಯರಿಗಾಗಿ ದೇವರ ಆ ಒಂದಾಗಿರುವಿಕೆಯು ನಂಬಿಕೆಯ ಕೀಲುಗೂಟವಾಗಿದೆ. ಇದು ಇನ್ನೂ ಇರುವುದಾಗಿದೆ. ಹೊಸ ಒಡಂಬಡಿಕೆಯು ದೇವರು ಒಬ್ಬನೇ ಇದ್ದಾಗಲೂ ಮೂವರು ವ್ಯಕ್ತಿಗಳ ಸಂಗಮ ಎಂಬುದನ್ನು ವಿವರಿಸಲಿಕ್ಕೆ ಹೊಸ ಒಡಂಬಡಿಕೆ ಎಲ್ಲಿಯೂ ತಾತ್ವಿಕವಾಗಿ ಚರ್ಚೆಮಾಡುವದಿಲ್ಲ. ಪೇತ್ರನಿಗೆ, ತ್ರೈತ್ವವು ಸರಳವಾಗಿ ಇದ್ದದ್ದೇ ಆಗಿದೆ. ಆರಂಭದ ಇತಿಹಾಸದಿಂದಲೂ ಸಭೆಯು ಈ ಪರಿಕಲ್ಪನೆಯೊಡನೆ ಹೋರಾಡುತ್ತಾ ಬಂದಿದೆ. ತ್ರೈತ್ವದ ವಿವರಣೆಯು ಅಸಂಖ್ಯಾವಾಗಿ ಮಾಡಲ್ಪಟ್ಟಿದ್ದು ಶುದ್ಧೀಕರಣೆಯಲ್ಲಿ ಅವುಗಳು ಕೊರತೆಯಲ್ಲಿ ಇರುವವು ಆಗಿವೆ.

ತ್ರೈತ್ವವು ಹೋಲಿಕಾತ್ಮಕವಾಗಿ ಯಾಕೆ ಅಲ್ಪ ಲಕ್ಷವನ್ನು ಹೊಂದಿದೆ? ಒಂದು ಕಾರಣವೆಂದರೆ ಬೈಬಲ್ ಈ ಪದವನ್ನು ಬಳಸದೆ ಇರುವುದೇ ಆಗಿದೆ. ಹತ್ತೊಂಬತ್ತನೆಯ ಶತಮಾನದ ಆದಿಯಲ್ಲಿ, ಪ್ರಭಾವಿಯುತ Barton W. Stone ಸುವಾರ್ತಾ ಪ್ರವಾಚಕರು ಆಗಿದ್ದರು. Stoneನ ನೆರಳು ಹೊಸ ಒಡಂಬಡಿಕೆಯ ಅಮೇರಿಕೆಯ ಸಭೆಯ ಪುನಃಸ್ಥಾಪನೆಯ ಚಳುವಳಿಯ ಮೇಲೆ ತನ್ನಿಂದ ತಾನೇ ದೊಡ್ಡ ರೀತಿಯಲ್ಲಿ ಪ್ರಭಾವ ಬೀರಿತ್ತು. ತಾವು ಅರ್ಥೈಸಿಕೊಳ್ಳುವ ರೀತಿಯಲ್ಲಿ ಆತನ ಹೆಸರನ್ನು ಕೇಳದವರ ಅನೇಕರ ಮೇಲೆ ಆತನು ಪ್ರಭಾವ ಬೀರಿದನು. Stoneನು ತ್ರೈತ್ವದ ಆ ಪರಿಕಲ್ಪನೆಗೂ ಆತನಿಗೂ ಯಾವ ಸಂಬಂಧವು ಇಲ್ಲ. ಇದು ಅಸಂಬದ್ಧವಾದದ್ದು ಎಂಬುದನ್ನು ಆತನು ಕಾದುಕೊಂಡನು. ತ್ರೈತ್ವವು ಅವಶ್ಯಕ ವಾದ ತತ್ವ ಎಂದು ಇಬ್ಬರು ಕ್ರೈಸ್ತೀಯ ಬೋಧನೆ ಹೇಗಾಗುತ್ತದೆ?[7] ವಿಶ್ವಾಸಿಗಳೊಳಗಿನ ಐಕ್ಯತೆಗೋಸ್ಕರ ತ್ರೈತ್ವದ ಮೇಲೆ ಯಾವದೇ ನಿರ್ಧಿಷ್ಟ ಅಭಿಪ್ರಾಯವನ್ನು ಕೊಡಲು Stoneನು ಬಯಸಲಿಲ್ಲ. ಸಭೆಯಲ್ಲಿ ಇಂದು ಅನೇಕರು ಭಿನ್ನಾಭಿಪ್ರಾಯಗಳನ್ನು ಉಳ್ಳವರಾ ಗಿದ್ದಾರೆ. ಹೇಗೋ, ಪೇತ್ರನು ಸ್ಪಷ್ಟಪಡಿಸಿದಂತೆ, "ತ್ರೈತ್ವ" ಎಂಬ ಪದವು ಬೈಬಲಿನಲ್ಲಿ ಇದೆಯೋ ಇಲ್ಲವೋ, ಆದರೆ ಅದರ ಪರಿಕಲ್ಪನೆಯು ಮಾತ್ರ ಇರುವುದಾಗಿದೆ. ದೇವರು ಒಬ್ಬನೇ ಮತ್ತು ಅದೇ ಸಮಯದಲ್ಲಿ ಆತನು ಮೂರು ಆಗಿದ್ದಾನೆ ಎಂಬುದನ್ನು ಹೇಗೆ ಅರಿತುಕೊಳ್ಳಬಹುದು ಎಂದು ಯಾವೊಬ್ಬ ಕ್ರೈಸ್ತನು ದೃಢತೆಯೊಡನೆ ಹೇಳಬಹುದಾಗಿದ್ದು, ನಾವು ಸಹ ಪೇತ್ರನೊಡನೆ ದೇವರು ತಂದೆಯೂ ಮಗ, ಪರಿಶುದ್ದಾತ್ಮ ಎಂದು ಖಂಡಿತವಾಗಿ ಹೇಳಬಹುದಾಗಿದೆ.

ಆತನ ಪೀಠಿಕಾ ರೂಪವು ಸಂಪೂರ್ಣವಾಗುವದರ ಜೊತೆ, ಪೇತ್ರನು ನಂತರದಲ್ಲಿ: **ನಿಮಗೆ ಕೃಪೆಯೂ ಶಾಂತಿಯೂ ಹೆಚ್ಚೆಚ್ಚಾಗಿ ದೊರೆಯಲಿ** ಎಂದು ಔಪಚಾರಿಕ ವಂದನೆಗಳನ್ನು ಮುಂದುವರಿಸುತ್ತಾನೆ. ಅಪೊಸ್ತಲನು ತನ್ನ ಎರಡನೆಯ ಪತ್ರವನ್ನು ಅದೇ ಪದಗಳಿಂದ ಗ್ರೀಕ್‌ನಲ್ಲಿ ಬರೆಯಲು ಆರಂಭಿಸಿದನು (2 ಪೇತ್ರ 1:2). ಪೌಲನ ಸಾಮಾನ್ಯವಾದ ತನ್ನ ಪತ್ರದ ವಂದನಾರ್ಪಣೆಯಲ್ಲಿ "ಕೃಪೆ ಮತ್ತು ಶಾಂತಿ" ಎಂಬ ಪದಗಳನ್ನು ಬಳಸಿದ್ದಾನೆ. ತನ್ನ ಓದುಗರಿಗೋಸ್ಕರ ದ್ವಿಗುಣವಾಗುವಂಥ ಹಾರೈಕೆಗಳನ್ನು ಪೇತ್ರನು ಸೇರಿಸುವವನಾಗಿದ್ದಾನೆ. ಅಂದರೆ, ಆ ಪದಗಳು ಔಪಚಾರಿಕವಾದವುಗಳು. ಅಸಂಭವನೀಯವಾಗಿ ಪೇತ್ರನು ದೊಡ್ಡ ಯೋಚನೆಯ ವ್ಯವಹಾರವನ್ನು ಅವುಗಳ ಅರ್ಥವನ್ನು ಅವನು ತನ್ನ ಓದುಗರಿಗೆ ಹೇಳುವಾಗ ಕೊಟ್ಟನು. ಇನ್ನೊಂದು ಅರ್ಥದಲ್ಲಿ, ಆ ಪದಗಳು ಔಪಚಾರಿಕತೆಗಿಂತಲೂ ಹೆಚ್ಚಿನವು ಆಗಿವೆ.

ಪೇತ್ರನು ಈ ಕ್ರೈಸ್ತರಿಗೆ ದೇವರ ಕೃಪಾಪೂರಿತವಾದ ಮತ್ತು ಉಚಿತವರಗಳ ಹೃದಯಪೂರಕ ವಂದನೆಗಳನ್ನು, ದೈವೀಯ ಶಾಂತಿಯ ಜೊತೆಗೂಡಿದ ಸಮಾಧಾನವು ಅವರ ಜೀವಿತದಲ್ಲಿ ಲಕ್ಷಿಕರಿಸುವದನ್ನು ತಿಳಿಯಸಲು ಬಯಸುವವನಾಗಿದ್ದಾನೆ.

## ಅನ್ವಯ

**ಆರಿಸಲ್ಪಟ್ಟ ಪರದೇಶಿಗಳು (1:1, 2)**

ಮೋಶೆಯು ಇಸ್ರಾಯೇಲರಿಗೆ ಧರ್ಮಶಾಸ್ತ್ರವನ್ನು ಕೊಟ್ಟಾಗ, ಆತನು ಪದಗಳೊಡನೆಯ ತೆಗೆದುಹಾಕಲ್ಪಡುವಿಕೆಯನ್ನು ಆತನು ಅನುಸರಿಸುವವನಾಗಿದ್ದು, “ಈ ಚಿತ್ತವನ್ನು ಮಾಡುವ ವ್ಯಕ್ತಿಯು ತನ್ನ ಜನರಿಂದ ಪ್ರತ್ಯೇಕಿಸಲ್ಪಡುತ್ತಾನೆ.” ಉದಾಹರಣೆಗೆ, ಈ ರೀತಿಯ ದುರಾ ಚಾರಿಗಳಿಗೆ ದಂಡನೆಯನ್ನು ಮುಂದೆ ಇಟ್ಟಿದ್ದಾನೆ:

> ... ನಾನಂತೂ ಆ ಮನುಷ್ಯನಿಗೂ ಅವನ ಕುಟುಂಬದವರಿಗೂ ವಿಮುಖನಾಗಿ ಅವನನ್ನು ಮಾತ್ರವಲ್ಲದೆ ಅವನನ್ನು ಹೊಂದಿಕೊಂಡು ದೇವದ್ರೋಹಿಗಳಾಗಿ ಮೋಲೆಕ ನಿಗೆ ಸೇವೆ ಮಾಡಿದವರೆಲ್ಲರನ್ನೂ ಕುಲದಿಂದ ತೆಗೆದುಹಾಕುವೆನು. ಯಾವನಾದರೂ ಸತ್ತವರಲ್ಲಿ ವಿಚಾರಿಸುವವರ ಅಥವಾ ಬೈತಾಳಿಕರ ಬಳಿಗೆ ಹೋಗಿ ಅವರ ಆಲೋಚನೆ ಕೇಳಿಕೊಂಡು ದೇವದ್ರೋಹಿಯಾದರೆ ನಾನು ಆ ಮನುಷ್ಯನಿಗೆ ವಿಮುಖವಾಗಿ ಅವನನ್ನು ಕುಲದಿಂದ ತೆಗೆದುಹಾಕುವೆನು (ಯಾಜಕಕಾಂಡ 20:5, 6).

ಪಶ್ಚಿಮದ ಹತ್ತಿರದ ಪ್ರಾಚೀನ ಜನಾಂಗಗಳ ಹತ್ತಿರದ ವ್ಯವಸ್ಥೆಯೊಳಗೆ ಇರುವದನ್ನು ತೆಗೆದುಹಾಕುವ ಗಂಭೀರವಾದ ಶಿಕ್ಷೆಗಿಂತ ಹೆಚ್ಚಿನ ಶಿಕ್ಷೆಯು ಒಬ್ಬ ವ್ಯಕ್ತಿಗೆ ಇರುತ್ತಿರಲಿಲ್ಲ. ಒಬ್ಬ ವ್ಯಕ್ತಿಯು ತೆಗೆದುಹಾಕಲ್ಪಟ್ಟರೆ ಇದು ಗಂಭೀರವಾದ ದಂಡನೆಯಾಗುತ್ತಿತ್ತು. ಯೂದಾಯವು ಬೆಬಿಲೋನಿನಿಂದ ಆಕ್ರಮಿಸಲ್ಪಟ್ಟಾಗ, ಸಮಸ್ತ ರಾಷ್ಟ್ರವು ಮನೆಯಿಂದ ದೂರದಲ್ಲಿ ವಲಸೆಹೋಗುವವರಾದರು. ಬೆಬಿಲೋನಿನಿಂದ ಒಬ್ಬ ಬಹಿಷ್ಕೃತನು “ನಾವು ಪರದೇಶದಲ್ಲಿ ಯೆಹೋವ ಗೀತೆಯನ್ನು ಹಾಡುವದು ಹೇಗೆ?” (ಕೀರ್ತನೆ 137:4) ಎಂದು ಪ್ರಲಾಪಿಸಿದ್ದಾನೆ.

ಬಹಿಷ್ಕೃತರ ವಿಷಯವು ಬೈಬಲಿನಲ್ಲಿ ಆಳವಾಗಿ ಸಾಗಿದೆ. ಅಬ್ರಹಾಮನು ಅಲೆಮಾರಿಯಾಗಿ ಮತ್ತು ಪ್ರವಾಸಿಗನಾಗಿ ಕಾನಾನನ್ನು ಪ್ರವೇಶಿಸಿದನು. ಈ ಭೂಮಿಯ ಯಾರೊಬ್ಬ ಜನರು ಅವನವರಾಗಿರಲಿಲ್ಲ. ಆತನ ಹೆಂಡತಿ ಸಾರಳು ಮರಣಿಸುವ ಸಮಯವು ಬಂದಿತು. ಜೀವಿ ಸುವವರು ಅಲ್ಲಿಂದ ಸಾಗಬಹುದಿತ್ತು ಅದರೆ ಸತ್ತವರಲ್ಲ. ಆದ್ದರಿಂದ ಹೂಣುವ ಸ್ಥಳಕ್ಕಾಗಿ ಒಂದು ತುಂಡು ಭೂಮಿಯು ಆತನಿಗೆ ಅವಶ್ಯವಾಗಿತ್ತು. ಆತನು ಕಾನಾನಿನಲ್ಲಿ ಇದ್ದ ಜನರಿಗೆ ತನ್ನ ಸ್ಥಿತಿಯನ್ನು ತಿಳಿಸುತ್ತಾ: “ನಾನು ನಿಮ್ಮಲ್ಲಿ ಪರದೇಶದವನೂ ಪರವಾಸಿಯೂ ಆಗಿದ್ದೇನಷ್ಟೇ ... ಸಮಾಧಿಗೋಸ್ಕರ ನಿಮ್ಮಲ್ಲಿ ನನ್ನ ಸ್ವಂತಕ್ಕೆ ಭೂಮಿಯನ್ನು ಕೊಡಬೇಕೆಂದು” ವಿವರಿಸಿದನು (ಆದಿಕಾಂಡ 23:4).

ಅಬ್ರಹಾಮನ ಪ್ರಕಾರ ತೆಗೆದುಹಾಕಲ್ಪಡುವದು ಎಂದರೆ, ತನ್ನ ಪ್ರದೇಶದಲ್ಲಿ ಇರದೆ ಇರುವದು, ಎಂದಿಗೂ ಇಸ್ರಾಯೇಲ ಜನರನ್ನು ಬಿಡದಿರುವದು ಆಗಿತ್ತು. ಶತಮಾನಗಳ ನಂತರ ಅಬ್ರಹಾಮನ ಸಂತತಿಯವರನ್ನು ಮೋಶೆಯು ಐಗುಪ್ತಕ್ಕೆ ನಡೆಸಿದವು. ಅರಣ್ಯದಲ್ಲಿ ಅವರಿಗೆ ದೇವರ ಧರ್ಮಶಾಸ್ತ್ರವನ್ನು ಕೊಟ್ಟನು. ಅದರ ಹಿಂದಿನವುಗಳಲ್ಲಿ ಇದು ಒಂದಾಗಿತ್ತು: “ಭೂಮಿಯನ್ನು ಶಾಶ್ವತವಾಗಿ ವಿಕ್ರಮಿಸಬಿಡಬಾರದು. ಯಾಕೆಂದರೆ ಆ ಭೂಮಿ ನನ್ನದು; ನೀವಾದರೋ ಪರವಾಸಿಗಳಾಗಿ ನನ್ನ ಆಶ್ರಯದಲ್ಲಿ ಇಳಕೊಂಡವರೇ” (ಯಾಜಕಕಾಂಡ 25:23). ಇಸ್ರಾಯೇಲರು ಕಾನಾನಿನಲ್ಲಿಯೇ ಇದ್ದುಬಿಡಬಹುದಾಗಿತ್ತು, ಆದರೆ ಅಲ್ಲಿಯೇ

ಸಂಪೂರ್ಣವಾಗಿ ಮನೆಯನ್ನು ಎಂದಿಗೂ ಮಾಡಿಕೊಳ್ಳಬಾರದಿತ್ತು.

ತನ್ನ ಜೀವಿತವು ಅಂತ್ಯಕ್ಕೆ ನಡೆದಂತೆಯೇ, ದಾವೀದನು ಯೆರೂಸಲೇಮಿನಲ್ಲಿ ದೇವಾಲಯ ಕಟ್ಟುವ ಸಿದ್ಧತೆಗೆ ತೊಡಗಿದನು. ಅರಸನು ಕರ್ತನನ್ನು ಹರಿಸುತ್ತಾ ಈ ರೀತಿಯಲ್ಲಿ ಪ್ರಾರ್ಥಿಸಿದನು: "ನಾವು ನಿನ್ನ ದೃಷ್ಟಿಯಲ್ಲಿ ಪರದೇಶಿಗಳು ನಮ್ಮ ಪಿತೃಗಳೆಲ್ಲರಂತೆ ಪ್ರವಾಸಿಗಳು ಆಗಿದ್ದೇವೆ" (1 ಪೂರ್ವಕಾಲವೃತ್ತಾಂತ 29:15). "ಯೆಹೋವನೇ ನನ್ನ ಪ್ರಾರ್ಥನೆಯನ್ನು ಲಾಲಿಸು; ನನ್ನ ಮೊರೆಗೆ ಕಿವಿಗೊಡು, ನನ್ನ ಕಣ್ಣೀರನ್ನು ನೋಡು, ಸುಮ್ಮನಿರಬೇಡ. ನನ್ನ ಪೂರ್ವಿಕರಂತೆ ನಾನು ನಿನ್ನ ಮೊರೆಹೊಕ್ಕಿರುವ ಪ್ರವಾಸಿಯೂ ಪರದೇಶದವನು ಆಗಿದ್ದೇನಲ್ಲಾ" (ಕೀರ್ತನೆ 39:12) ಎಂದು ಅರಸನು ಈ ವಿಚಾರವನ್ನು ತನ್ನ ಕೀರ್ತನೆಯೊಂದರಲ್ಲಿ ಅಳವಡಿಸಿಕೊಂಡಿದ್ದಾನೆ.

ಪರವಾಸಿಗಳ, ಬಹಿಷ್ಕೃತರ, ಅಪರಿಚಿತರ ಈ ಸಮಗ್ರವಾದ ಹಿನ್ನಲೆಯಲ್ಲಿ ಪೇತ್ರನು ತನ್ನ ಓದುಗರಿಗೆ ಬರೆಯುತ್ತಿದ್ದಾನೆ. ಪತ್ರದ ಮೊದಲ ಓದುಗರು ತಮ್ಮ ನಂಬಿಕೆಗೋಸ್ಕರ ಬಳಲುವವರಾಗಿದ್ದರು. ಪರಿಣಾಮದಂತೆ, ಅಪೊಸ್ತಲನು ಮೂರು ಸತ್ಯಗಳನ್ನು ಅವರು ಅರಿತುಕೊಳ್ಳಬೇಕೆಂದು ಬಯಸುವವನಾಗಿದ್ದಾನೆ.

*ಮೊದಲು, ದೇವರ ನಂಬಿಗಸ್ತ ಜನರು ಈ ಜಗತ್ತಿನಲ್ಲಿ ಸಮಾಧಾನದಿಂದ ಇರುವದು ಸಾಧ್ಯವಿಲ್ಲ.* ಅದು ಅವರ ಜೀವಿತದ ಆದರ್ಶಗಳ ಅರಿವನ್ನು ಅವರು ಹೊಂದಿದ್ದಾರೆ, ವಿಚಾರ, ದೇವರಲ್ಲಿ ಅವರ ನಂಬಿಕೆ ಲೋಕದಲ್ಲಿ ಹೊಂದಾಣಿಕೆಯಾಗುವದಿಲ್ಲ, ಅವರು ಯೋಗ್ಯ ಸಾಂಗತ್ಯದಲ್ಲಿ ಪಾಲ್ಗೊಳ್ಳುವವರಾಗಿರುತ್ತಾರೆ. ಮೊದಲ ಶತಮಾನದ ಜಗತ್ತಿನಲ್ಲಿ ದೈವೀಯವಾಗಿರುವದಕ್ಕೆ ಇದು ಮಾರ್ಗವಾಗಿತ್ತು; ಇದು ಇನ್ನೂ ಈ ದಿನದಲ್ಲಿಯೂ ಇರುವದಾಗಿದೆ.

ಈ ಪತ್ರದ ಮೊದಲ ಓದುಗರು ಇರುವ ಜಗತ್ತು ಆಧುನಿಕ ಜಗತ್ತಿನಂತೆ ಇದ್ದರೂ ಅದಕ್ಕಿಂತಲೂ ಕೂಡಾ ಭಿನ್ನವಾಗಿತ್ತು. ನೈತಿಕತೆಯು ತುಂಬಿತುಳುಕಿತ್ತು. ಒಬ್ಬ ಮನುಷ್ಯನು ದಾಸಿಯೊಬ್ಬಳನ್ನು ತಂದಾಗ, ಆಕೆಯು ಆತನ ಸ್ವತ್ತಾಗಿದ್ದಳು. ದಾಸರ ಮಧ್ಯದ ಮದುವೆಯು ನಿಷೇಧವಾಗಿತ್ತು, ಮತ್ತು ಅಲ್ಲಿ ಬಹು ದಾಸರಿದ್ದರು. ವಿಚ್ಛೇದನವು ಗರ್ಭಪಾತದಂತೆಯೇ ಸಾಮಾನ್ಯವಾಗಿತ್ತು. ಬೇಕಿಲ್ಲದ ಮಕ್ಕಳು ಮೂಲತತ್ವಕ್ಕೆ ಒಡ್ಡಲ್ಪಡುತ್ತಾರೆ. ಹಿಂಸಾಚಾರವು ಮಿತಿಮೀರಿತ್ತು. ಪೇತ್ರನ ವೀಕ್ಷಕರು ಇರುವಂಥ ಗ್ರೀಕ್ ಮಾತನಾಡುವ ಜಗತ್ತು ರೋಮನ್ನರ ಬಹು ಕೂತುಹಲದಾಯಕ ಮನರಂಜನೆಗಳನ್ನು ತೆಗೆದುಕೊಂಡಿತ್ತು. ಸಾರ್ವಜನಿಕ ರಂಗ ಮಂದಿರಗಳು ಹೋರಾಟಗಾರ ಸೆಣಸಾಟವನ್ನು ಚಿತ್ರೀಕರಿಸುವುದಾಗಿತ್ತು. ಕ್ರೂರವಾದ ಪ್ರಾಣಿಯನ್ನು ಪ್ರದರ್ಶನಕ್ಕೆ ತರಲಾಗುತ್ತಿತ್ತು. ಹೆಚ್ಚಾದ ಮಾನವತೆಯ ರೀತಿಯಲ್ಲಿ, ಅವರು ಒಬ್ಬರ ಜೊತೆಗೊಬ್ಬರು ಕಾದಾಡುತ್ತಿದ್ದರು; ತನ್ನನ್ನು ರಕ್ಷಿಸಿಕೊಳ್ಳಲು ಕೊಟ್ಟ ಚಾಕುವಾಗಲಿ ಅಥವಾ ಬಲೆಯಾಗಲಿ ಇವುಗಳನ್ನು ಹೊಂದಿದ ದೂಷಿತ ಅಪರಾಧಿಯನ್ನು ಕ್ವಚಿತ್ತವಾಗಿಲ್ಲದೆ ಎದುರಿಸುತ್ತಿದ್ದರು. ಹಿಂಸೆ, ಕ್ರೂರತೆ, ಮತ್ತು ಅನೈತಿಕತೆ ಇವುಗಳು ಇರುವ ಜಗತ್ತಿನ ಮಧ್ಯದಲ್ಲಿ ಕ್ರೈಸ್ತರು ಅಸಂತುಷ್ಟಿಗಳಾಗಿ ಇದ್ದರು. ಅವರು ಬಹಿಷ್ಕೃತರಂತೆ ಅನುಭವಿಸುವವರಾಗಿದ್ದರು.

ಇಪ್ಪತ್ತೊಂದನೆಯ ಶತಮಾನದ ಜಗತ್ತಿಗೆ ಇದರ ಅನ್ವಯವು ಕಷ್ಟಕರವಾದದ್ದಲ್ಲ. ಮಾದಕ ವಸ್ತುಗಳ ಆಕ್ರಮಣವು ನಗರ ಬೀದಿಗಳಲ್ಲಿ ವಿಪರೀತವಾಗಿದೆ. ಲಂಪುಟ ಸಾಹಿತ್ಯ, ವೇಶ್ಯಾವಾಟಿಕೆ, ಮತ್ತು ಲೈಂಗಿಕ ದಾಸತ್ವವು ಕೂಡಾ ಇಂದಿನ ಆಧುನಿಕ ಜಗತ್ತಿನಲ್ಲಿ ವಿರಳವಾಗಿಲ್ಲ. ಪ್ರತಿರಾತ್ರಿಯ ವಾರ್ತಾ ವಿಶೇಷಗಳು ಕ್ರೈಸ್ತರನ್ನು ಅವರ ತಲೆಯನ್ನು ತೂಗುವತ್ತ ನಡೆಸುವವು ಆಗಿದ್ದವು. ಕ್ರಿಸ್ತನನ್ನು ಗಂಭೀರವಾಗಿ ತೆಗೆದುಕೊಳ್ಳುವ ಮಟ್ಟದಲ್ಲಿ, ಅದೇ ಮಟ್ಟದಲ್ಲಿ ಕ್ರೈಸ್ತರು ನಜರೇತಿನ ಯೇಸುವನ್ನು ಅನುಸರಿಸುವವರಾಗಿದ್ದರು, ಅವರು ತಾವು ಈ ಜಗತ್ತಿನಲ್ಲಿ ಬಹಿಷ್ಕೃತರು, ಪರದೇಶಿಗಳು ಆಗಿರುವದು ಮತ್ತು ಇರುವದು ಮುಂದುವರೆಯುವದು ಎಂಬ ಅರಿವನ್ನು ಹೊಂದಿದ್ದಾರೆ.

*ಎರಡನೆಯದಾಗಿ, ಅವರ ಸಂಕಟದ ಸ್ಥಿತಿಯಲ್ಲಿ ಅವರು ದೇವರಿಂದ ಆರಿಸಲ್ಪಟ್ಟವರು ಎಂಬುದನ್ನು ಅರಿಯಬೇಕೆಂದು ಪೇತ್ರನು ಬಯಸುವವನಾಗಿದ್ದಾನೆ.* ಅಂಗಡಿಯಾತನು ಬಟ್ಟೆಗಳನ್ನು ಆರಿಸುವ ನಿಟ್ಟಿನಲ್ಲಿ, ನಾವು ಆರಿಸಲ್ಪಡುವದು ನಿಷ್ಕ್ರಿಯೆಯ ಸಂಗತಿಯೆಂದು ಯೋಚಿಸುವದು ಸರಿಯೇ. ಒಬ್ಬನು ಆರಿಸಲ್ಪಡುವದಕ್ಕಾಗಿ ನಿಷ್ಕ್ರಿಯೆಯುಳ್ಳವನಾಗಿ ಕಾದುಕೊಳ್ಳುವವನಾಗಿದ್ದಾನೆ. ಪಾಪಿಯು ಮರಣದಿಂದ ಕ್ರಿಸ್ತನಲ್ಲಿಯ ಜೀವಿತದೆಡೆ ಸಾಗಿದಾಗ ದೇವರು ಎಲ್ಲವನ್ನು ತಾನೇ ತೆಗೆದುಕೊಳ್ಳುವವನಾಗಿದ್ದಾನೆ ಎಂಬ ಧರ್ಮಜಗತ್ತಿನಲ್ಲಿ ಎಲ್ಲಡೆ ಹರಡಿದ ತತ್ವವು ಇರುವದನ್ನು ಕಾದುಕೊಳ್ಳುವದಾಗಿದೆ. ದೇವರು ಆರಿಸುತ್ತಾನೆ. ದೇವರು ನಂಬಿಕೆಯನ್ನು ಕೊಡುತ್ತಾನೆ. ದೇವರು ರಕ್ಷಣೆಗೆ ರುಜು ಆಗಿದ್ದಾನೆ. ಪಾಪಿಯಿಂದ ಸಿಕ್ಕುವದು ಎಂದು ಯಾವುದೂ ಹೇಳಲ್ಪಟ್ಟಿಲ್ಲ.

ಮರಣದಿಂದ ಕ್ರಿಸ್ತನಲ್ಲಿಯ ಜೀವದೆಡೆಗೆ ಸಾಗುವದು ಎಲ್ಲವು ನಿಷ್ಕ್ರಿಯೆಯ ಅಂಶವೇ? ಪೇತ್ರನು ಹಾಗೆ ಯೋಚಿಸುವದಿಲ್ಲ. ಪಂಚಾಶತ್ತಮ ದಿನದಂದು 1 ಪೇತ್ರ ಬರೆದ ಇದೇ ಅಪೊಸ್ತಲನು ಮೊದಲ ಪ್ರಸಂಗವನ್ನು ಬೋಧಿಸಿದನು. ಆತನು ಅಂತ್ಯಕ್ಕೆ ಬಂದಾಗ, ಹಾಗೆ ಮಾಡಲು ನಾವೇನು ಮಾಡಬೇಕೆ ಎಂದು ಜನಸಮೂಹವು ಕೇಳಿತು. ಅವರ ಪಾಪಗಳಿಗೋಸ್ಕರ ಪಶ್ಚಾತ್ತಾಪ ಪಡಬೇಕು ಮತ್ತು ದೀಕ್ಷಾಸ್ನಾನಮಾಡಿಸಿಕೊಳ್ಳಬೇಕು ಎಂದು ಪೇತ್ರನು ಹೇಳಿದನು (ಅಪೊಸ್ತಲರ ಕೃತ್ಯಗಳು 2:38). ಅವರು ಏನಾದರೂ ಮಾಡಬೇಕಿತ್ತು. "ಬೇರೆ ಅನೇಕವಾದ ಮಾತುಗಳಿಂದ ಅವನು ಖಂಡಿತವಾದ ಸಾಕ್ಷಿ ನುಡಿದು ವಕ್ರಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ ಎಂದು ಅವರನ್ನು ಎಚ್ಚರಿಸಿದನು" ಎಂದು ಲೂಕನು ಈ ಮಹತ್ವವಾದದ್ದನ್ನು ಹೇಳಿಕೆಯನ್ನು ಇದಕ್ಕೆ ಸೇರಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 2:40). "ವಕ್ರ ಸಂತತಿಯವರಿಂದ ನಿಮ್ಮನ್ನು ನೀವು ತಪ್ಪಿಸಿಕೊಳ್ಳಿರಿ" ಎಂದು KJV ಹೇಳುತ್ತದೆ. ಇನ್ನೊಂದು ಓದುವಿಕೆಯಲ್ಲಿ ಪೇತ್ರನು ತನ್ನ ಕೇಳುಗರಿಗೆ ಅವರಿಗೆ ಮಾಡುವದಕ್ಕಾಗಿ ಒಂದು ಇದೆ ಎಂದು ಸೂಚಿಸುವವನಾಗಿದ್ದಾನೆ.

ಮಾನವ ಜನಾಂಗವನ್ನು ರಕ್ಷಿಸಲು ದೇವರು ಮಧ್ಯವರ್ತಿಯಾಗಿದ್ದಾನೆ ಎಂಬುದು ನಿಜವಾಗಿದೆ. ಮನುಷ್ಯರು ಪಾಪದಲ್ಲಿ ಕಳೆದುಹೋದಾಗ, ನಿರೀಕ್ಷೆಯಿಲ್ಲದೇ ದೇವರು ಕಾರ್ಯಮಾಡಿದ್ದಾನೆ. ದೇವರು ನಂಬಿಗಸ್ತನಾದ ಅಬ್ರಹಾಮನನ್ನು ಕರೆದನು. ಆತನು ಐಗುಪ್ತದಿಂದ ದಾಸರನ್ನು ನಡೆಸಿದನು. ಬರಲಿರುವ ರಕ್ಷಕನಿಗಾಗಿ ಸಿದ್ಧವಾಗಲು ಆತನು ಜಗತ್ತನ್ನು ಸಂಸ್ಕರಿಸಿದನು. ಆತನು ತನ್ನ ಒಬ್ಬನೇ ಮಗನನ್ನು ಕಳುಹಿಸಿಕೊಟ್ಟನು. ಅವುಗಳಲ್ಲಿ ಎಲ್ಲವೂ ನಿಜ, ಆದರೆ ಅಂತ್ಯದಲ್ಲಿ, ದೇವರು ಮಾನವನ ಪ್ರತಿಕ್ರಿಯೆಯ ಮೂಲಕ ಉತ್ತರಿಸಲು ಕರೆಯುವವನಾಗಿದ್ದಾನೆ. ಕ್ರಿಸ್ತನೆಡೆಗೆ ಬಂದವನು ಸಂಪೂರ್ಣವಾಗಿ ನಿಷ್ಕ್ರಿಯೆಯವನಲ್ಲ. ಬಿಡುಗಡೆಯ ಸಂದೇಶವನ್ನು ಕೇಳಿದಾಗ, ಯೇಸುವು ಕ್ರಿಸ್ತನೆಂದು ನಂಬಿದಾಗ ಮತ್ತು ಅವರ ನಂಬಿಕೆಯ ಮೇಲೆ ಕಾರ್ಯಮಾಡುವವನು ಕ್ರೈಸ್ತರು ಎಂದು ನಂಬಿದಾಗ ಕ್ರೈಸ್ತರು ದೇವರಿಂದ ಆರಿಸಲ್ಪಟ್ಟವರಾಗುತ್ತಾರೆ.

*ಮೂರನೆಯದಾಗಿ, ಪೇತ್ರನು ಹೆಸರಿಸಿದ ಸಂಕಟಪಡುವ ಕ್ರೈಸ್ತರು ತಾವು ಶುದ್ಧೀಕರಿಸಲ್ಪಟ್ಟವರು ಎಂದು ತಿಳಿಯಬೇಕೆಂದು ಬಯಸುವವನಾಗಿದ್ದಾನೆ.* ದೇವರೊಂದಿಗಿನ ಅವನ ಸಂಬಂಧವು, ಯೇಸು ಕ್ರಿಸ್ತನಲ್ಲಿ ಅವರು ಹಂಚಿಕೊಂಡ ನಿರೀಕ್ಷೆ ಇವುಗಳು "ಆತ್ಮನಲ್ಲಿ ಶುದ್ಧೀಕರಿಸುವ ಕಾರ್ಯಗಳಿಂದ" ಬಂದದ್ದಾಗಿದೆ. ಶುದ್ಧೀಕರಿಸಲ್ಪಡುವದು ಪರಿಶುದ್ಧರನ್ನಾಗಿಸುವದು ಆಗಿದೆ; ಪರಿಶುದ್ಧರನ್ನಾಗಿ ಮಾಡುವದು ದೇವಜನವನ್ನಾಗಿಸುವದು ಆಗಿದೆ. ಇದು ದೇವರಿಗಾಗಿ ಮೀಸಲಿಡಲ್ಪಟ್ಟದ್ದು ಆಗಿದೆ. ದೇವರು ಈ ಪತ್ರದ ಮೊದಲ ಓದುಗರನ್ನು ಕೇವಲ ಆರಿಸಿಕೊಳ್ಳಲಿಲ್ಲ, ಅವರನ್ನು ಪರಿಶುದ್ಧ ಜನವನ್ನಾಗಿ ಮಾಡಿದನು.

ಕಳೆದುಹೋದ ಪಾಪಿಯು ಸುವಾರ್ತೆಯನ್ನು, ಕೇಳಿದಾಗ ಅದರ ಸಂದೇಶವನ್ನು ನಂಬಿದಾಗ, ಮತ್ತು ದೇವರಿಗೆ ವಿಧೇಯನಾದಾಗ, ದೇವರು ಅವನನ್ನು ಅಥವಾ

ಅವಳನ್ನು ಶುದ್ಧೀಕರಿಸುವನು. ಶುದ್ಧೀಕರಿಸುವಿಕೆಯು ಒಬ್ಬ ವ್ಯಕ್ತಿಯು ತನಗೋಸ್ಕರ ಮಾಡಿಕೊಳ್ಳುವದಲ್ಲ. ದೇವರು ಕ್ರೂಜೆಯ ಮೇಲೆ ಯೇಸುವಿನ ರಕ್ತವನ್ನು ಚಲ್ಲುವ ಮೂಲಕ ಶುದ್ಧಿಕರಿಸಿದನು. ದೇವರು ಶುದ್ಧೀಕರಿಸಿದ ಜನರು ದೇವಜನರಾಗಿದ್ದಾರೆ. ಅವರು ದೇವರ ಪರಿಶುದ್ಧ ಜನರಾಗಿದ್ದಾರೆ. ಅನೇಕ ಕ್ರೈಸ್ತರು "ನಾನು ಪರಿಶುದ್ಧನು" ಎಂದು ಹೇಳುವದಕ್ಕೆ ನಾಚಿಕೆಪಡುವದುಂಟು. ಪೇತ್ರನಿಗೆ ಯಾವ ನಾಚಿಕೆಯೂ ಇರಲಿಲ್ಲ. ಕ್ರೈಸ್ತನಾಗಿರುವದು ಪರಿಶುದ್ಧನಾಗಿರುವದು ಆಗಿದೆ. ಪೇತ್ರನ ಬೋಧನೆಯು, ಎಲ್ಲಾ ಹೊಸ ಒಡಂಬಡಿಕೆಯವರಿಗೆ ಸಾಮಾನ್ಯವಾದದ್ದು ಆಗಿದ್ದು, ಇದು ದೇವರು ನಿಮ್ಮನ್ನು ಪರಿಶುದ್ಧರಾಗಿ ಮಾಡಿರುವದರಿಂದ, ಆತನು ನಿಮ್ಮನ್ನು ನಿರ್ಮಿಸಿದ ಹಾಗೆ ಪರಿಶುದ್ಧ ಜನರಂತೆ ಜೀವಿಸಿರಿ. ಪರಿಶುದ್ಧತೆಯು ಮಾನವನ ಶ್ರೇಣಿಯ ಮೇಲೆ ಆತುಕೊಂಡಿರುವದಿಲ್ಲ. ಹೀಗೆ ನಂಬಿಗಸ್ತ ಜೀವಿಸುವಿಕೆಗೆ ನಂಬಿಗಸ್ತ ಪ್ರತಿಕ್ರಿಯೆಯು ಅವಶ್ಯವಾಗಿದೆ: "ಧರ್ಮಶಾಸ್ತ್ರ ಕೇಳಿದ ಮಾತ್ರದಿಂದಲೇ ಯಾರೂ ದೇವರ ಸನ್ನಿಧಿಯಲ್ಲಿ ನೀತಿವಂತರಾಗಿರುವುದಿಲ್ಲ; ಅದನ್ನು ಅನುಸರಿಸುವವರೇ ನೀತಿವಂತರೆಂದು ನಿರ್ಣಯಿಸಲ್ಪಡುವರು" ಪೌಲನು ಹೀಗೆ ಹೇಳಿದ್ದು ಸರಿಯಾಗಿದೆ (ರೋಮಾಪುರ 2:13).

*ಸಾರಾಂಶ.* ಎರಡು ಸಾವಿರ ವರ್ಷಗಳಿಂದ ಕ್ರೈಸ್ತರು ದೈವ ವಿರೋಧಿ ಜನರಿಂದ ವಿರೋಧವನ್ನು ಎದುರಿಸುತ್ತಿದ್ದಾರೆ. ಕೆಲಸಾರಿ ಸಂಕಟಪಡುವದು ದೈಹಿಕಕ್ಕಿಂತಲೂ ಹೆಚ್ಚಾದದ್ದು ಆಗಿರುತ್ತದೆ; ಕೆಲಸಾರಿ ಇದು ಹೆಚ್ಚು ಮಾನಸಿಕವಾದದ್ದು ಆಗಿರುತ್ತದೆ. ಇದು ಅಲ್ಲಿ ಯಾವಾಗಲು ಇರುವುದಾಗಿದೆ. ವಿರೋಧಗಳಿಂದ ಯಾವ ಪರಲೋಕವು ಇಲ್ಲ ಎಂದು ಪೇತ್ರನು ತನ್ನ ಓದುಗರಿಗೆ ವಾಗ್ದಾನಮಾಡುತ್ತಾನೆ. ಈ ರೀತಿಯಲ್ಲಿ ಆತನು ಅವುಗಳನ್ನು ಕಾರಣಿಕರಿಸುತ್ತಾನೆ: (1) ಕ್ರೈಸ್ತರು ಸಂಕಟಪಟ್ಟಾಗ ಅವರು ದೇವರ ಜನರ ಸಾಲಿನಲ್ಲಿ ಬಹುಕಾಲ ನಿಲ್ಲುವರು. ಈ ಸಮಯದಲ್ಲಿ ತಾವು ಸಮಾಧಾನದಿಂದ ಇದ್ದೇವೆ ಎಂದು ದೇವಜನರು ಯಾವಾಗಲು ಅರಿತುಕೊಳ್ಳುವವರಾಗಿದ್ದಾರೆ. ಅವರು ಈ ಜಗತ್ತಿನಲ್ಲಿ ಕೇವಲ ಬಹಿಷ್ಕೃತರು, ಪರದೇಶಿಗಳು, ಅಪರಿಚಿತರು ಆಗಿದ್ದಾರೆ. (2) ಜಗತ್ತು ಅವರ ಬಗ್ಗೆ ಏನೇ ಯೋಚಿಸಲಿ, ಕ್ರಿಸ್ತನಲ್ಲಿ ಪರಿಶುದ್ಧಿಕರಿಸಲ್ಪಟ್ಟವರಾದಂಥ ಅವರಿಗೆ ಪರಿಶುದ್ಧ ಜೀವಿತ ಜೀವಿಸುವ ಅಗತ್ಯವಿದೆ. (3) ದೇವರು ಅವರನ್ನು ಪರಿಶುದ್ಧರನ್ನಾಗಿ ಮಾಡಿದನು. ಅವರು ಶುದ್ಧೀಕರಿಸಲ್ಪಟ್ಟ ಪರಿಶುದ್ಧೀಕರಿಸಲ್ಪಟ್ಟವ ರಾದಂಥ ಅವರಿಗೆ ಪರಿಶುದ್ಧ ಜೀವಿತ ಜೀವಿಸುವ ಅಗತ್ಯವಿದೆ.

---

ಟಿಪ್ಪಣಿಗಳು

[1]ಧರ್ಮೋಪದೇಶಕಾಂಡ 32:30, 31; ಕೀರ್ತನೆ 18:2, 31, 46; 19:14; 28:1; 31:2, 3; 42:9; 62:2, 7; 71:3; 78:35; 89:26; 92:15; 94:22; 95:1; 144:1. [2]Paul S. Minear, "ಪರಿಶುದ್ಧ ಜನರು, ಪರಿಶುದ್ಧ ಭೂಮಿ, ಪರಿಶುದ್ಧ ಪಟ್ಟಣ: ಆದಾಕಾಲದ ಮತ್ತು ಶ್ರೇಷ್ಟ ಕ್ರೈಸ್ತರ ಮನೋಭಾವ," ವ್ಯಾಖ್ಯಾನ 37 (January 1983): 28. [3]I. Howard Marshall, *New Testament Theology: Many Witnesses, One Gospel* (Downers Grove, Ill.: InterVarsity Press, 2004), 644. [4]ವ್ಯಾಕರಣಿಯವಾಗಿ "ಆತ್ಮ" ಎಂಬ ಪದವು ಗ್ರೀಕರ genitive case ನಲ್ಲಿ ಇರುವುದಾಗಿದೆ. ಇದು subjective gentitive ಆಗಿದೆ. [5]A. M. Toplady, "Rock of Ages," *Songs of the Church,* comp. and ed. Alton H. Howard (West Monroe, La.: Howard Publishing Co., 1977). [6]J. Ramsey Michaels, *1 Peter,* Word Biblical Commentary, vol. 49 (Waco, Tex.: Word Books, 1988), 12. [7]Barton W. Stone ರವರು ಅನೇಕ ಬಾರಿ *The Christian Messenger* ಎಂಬ ಜರ್ನಲ್‌ನಲ್ಲಿ ಚರ್ಚಿಸಿದ್ದಾರೆ. ಅವರ ಜುಲೈ 1830ರ ಪತ್ರಿಕೆಯು (169-73) ಇದನ್ನು ಸೂಚಿಸುವುದಾಗಿದೆ. ತ್ರೈತ್ವದ ಸಾರಾಂಶದ ಬಗ್ಗೆ ನೋಡಿರಿ James DeForest Murch, *Christians Only: A History of the Restoration Movement* (Cincinnati: Standard Publishing, 1962), 92.